# ಅಧ್ಯಾಯ–I

## ರಾಜ್ಯ ಸಾರ್ವಜನಿಕ ವಲಯ ಉದ್ಯಮಗಳತ್ತ ಸ್ಥೂಲ ನೋಟ

# ಅಧ್ಯಾಯ–I

## 1. ರಾಜ್ಯ ಸಾರ್ವಜನಿಕ ವಲಯ ಉದ್ಯಮಗಳತ್ತ ಸ್ಥೂಲ ನೋಟ

### ಪೀಠಿಕೆ

**1.1** ಕರ್ನಾಟಕದಲ್ಲಿ ರಾಜ್ಯ ಸಾರ್ವಜನಿಕ ವಲಯ ಉದ್ಯಮಗಳು (ಸಾ.ವ.ಉ.ಗಳು) ರಾಜ್ಯದ ಅರ್ಥವ್ಯವಸ್ಥೆಯಲ್ಲಿ ಪ್ರಮುಖ ಸ್ಥಾನವನ್ನು ಹೊಂದಿವೆ. ರಾಜ್ಯ ಸರ್ಕಾರದ ಸ್ವಾಮ್ಯತೆಯಲ್ಲಿರುವ, ನಿರ್ವಹಿಸಲ್ಪಡುವ ಹಾಗೂ ನಿಯಂತ್ರಿಸಲ್ಪಡುವ ಈ ಸಾ.ವ.ಉ.ಗಳ ಮೂಲಕ ಕರ್ನಾಟಕ ಸರ್ಕಾರವು ವಾಣಿಜ್ಯಿಕ ಚಟುವಟಿಕೆಗಳನ್ನು ನಡೆಸುತ್ತದೆ. ಇವುಗಳನ್ನು ಮೂಲತ: ಶಾಸನಬದ್ಧ ನಿಗಮಗಳು ಹಾಗೂ ರಾಜ್ಯ ಸರ್ಕಾರಿ ಕಂಪನಿಗಳು ಎಂಬುದಾಗಿ ವರ್ಗೀಕರಿಸಲಾಗಿದೆ. ಶಾಸನಬದ್ಧ ನಿಗಮಗಳು ಶಾಸಕಾಂಗದ ವಿಶೇಷ ಕಾಯ್ದೆಯಿಂದ ಸ್ಥಾಪಿಸಲ್ಪಟ್ಟ ಸಾರ್ವಜನಿಕ ಉದ್ದಿಮೆಗಳಾಗಿವೆ. ಕಾಯ್ದೆಗಳು ನಿಗಮದ ಅಧಿಕಾರ ಮತ್ತು ಕಾರ್ಯಚಟುವಟಿಕೆಗಳು, ಕಾರ್ಮಿಕರನ್ನು ನಿರ್ವಹಿಸುವ ಕಾಯ್ದೆ ಮತ್ತು ಕಾನೂನುಗಳು ಹಾಗು ನಿಗಮ ಮತ್ತು ಸರ್ಕಾರದ ನಡುವಿನ ಸಂಬಂಧವನ್ನು ತಿಳಿಸುತ್ತವೆ. ಯಾವ ಕಂಪನಿಯಲ್ಲಿ ಶೇಕಡ 51ಕ್ಕೆ ಕಡಿಮೆ ಇಲ್ಲದಂತೆ ಪಾವತಿಸಲ್ಪಟ್ಟ ಬಂಡವಾಳವನ್ನು ಸರ್ಕಾರ(ಗಳು) ಹೊಂದಿರುತ್ತದೆಯೋ ಅದನ್ನು 'ಸರ್ಕಾರಿ ಕಂಪನಿ' ಎಂದು ಕರೆಯಲಾಗುತ್ತದೆ. ಇದರಲ್ಲಿ ಸರ್ಕಾರಿ ಕಂಪನಿಯ ಉಪಕಂಪನಿಯೂ ಸೇರಿರುತ್ತದೆ. ಮುಂದುವರೆದಂತೆ, ಯಾವುದೇ ಕಂಪನಿಯಲ್ಲಿ ಶೇಕಡ 51ರಷ್ಟು ಪಾವತಿಸಲ್ಪಟ್ಟ ಬಂಡವಾಳವನ್ನು ಸರ್ಕಾರ(ಗಳು), ಸರ್ಕಾರಿ ಕಂಪನಿಗಳು ಮತ್ತು ಸರ್ಕಾರದಿಂದ ನಿಯಂತ್ರಿಸಲ್ಪಟ್ಟ ನಿಗಮಗಳು ಯಾವುದೇ ಸಂಯೋಜನೆಯಲ್ಲಿ ಹೊಂದಿದ್ದರೆ, ಅದನ್ನು ಸರ್ಕಾರಿ ಕಂಪನಿಯಂತೆಯೇ (ಪರಿಗಣಿಸಲ್ಪಟ್ಟ ಸರ್ಕಾರಿ ಕಂಪನಿ) ಪರಿಗಣಿಸಲಾಗುವುದು.

**1.2** ಸಾ.ವ.ಉ.ಗಳು (ಸರ್ಕಾರಿ ಕಂಪನಿಗಳು ಮತ್ತು ಶಾಸನಬದ್ಧ ನಿಗಮಗಳು) ಮೂಲಸೌಕರ್ಯ, ಇಂಧನ ಹಾಗೂ ಹಣಕಾಸು, ಹೀಗೆ ಅರ್ಥವ್ಯವಸ್ಥೆಯ ಮೂರು ಪ್ರಮುಖ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತವೆ. ರಾಜ್ಯದ ಸಾ.ವ.ಉ.ಗಳು 31 ಮಾರ್ಚ್ 2014 ರಲ್ಲಿದ್ದಂತೆ 1.93 ಲಕ್ಷ ನೌಕರರಿಗೆ ಉದ್ಯೋಗ ನೀಡಿದ್ದವು. ಸಾ.ವ.ಉ.ಗಳಲ್ಲಿನ ವಲಯವಾರು ಹೂಡಿಕೆಗಳನ್ನು ಈ ಕೆಳಗೆ ನೀಡಲಾಗಿದೆ:

**ಕೋಷ್ಟಕ 1.1: ಸಾ.ವ.ಉ.ಗಳಲ್ಲಿನ ವಲಯವಾರು ಹೂಡಿಕೆ**

| ವಲಯದ ಹೆಸರು | ಸರ್ಕಾರಿ ಕಂಪನಿಗಳು[1] | | ಶಾಸನಬದ್ಧ ನಿಗಮಗಳು | ಒಟ್ಟು | ಹೂಡಿಕೆ[2] (₹ ಕೋಟಿಗಳಲ್ಲಿ) |
|---|---|---|---|---|---|
| | ಕಾರ್ಯನಿರತ | ಕಾರ್ಯಸ್ಥಗಿತ[3] | | | |
| ಕೃಷಿ ಮತ್ತು ಸಂಬಂಧಿತ | 12 | 5 | 1 | 18 | 448.23 |
| ಹಣಕಾಸು | 14 | - | 1 | 15 | 4,862.42 |
| ಮೂಲಸೌಕರ್ಯ | 12 | - | - | 12 | 36,398.10 |
| ತಯಾರಿಕೆ | 21 | 9 | - | 30 | 1,474.39 |
| ವಿದ್ಯುಚ್ಛಕ್ತಿ | 11 | - | - | 11 | 29,468.78 |
| ಸೇವೆ | 3 | - | 4 | 7 | 2,399.44 |
| ಇತರೆ | 2 | - | - | 2 | 0.10 |
| **ಒಟ್ಟು** | **75** | **14** | **6** | **95** | **75,051.46** |

31 ಮಾರ್ಚ್ 2014ರಲ್ಲಿ ಇದ್ದ 95 ಸಾ.ವ.ಉ.ಗಳ ಪೈಕಿ 81 ಕಾರ್ಯನಿರತವಾಗಿದ್ದವು ಹಾಗೂ 14 ಕಾರ್ಯಸ್ಥಗಿತವಾಗಿದ್ದವು. ಇವುಗಳಲ್ಲಿ ಎರಡು ಕಂಪನಿಗಳು[4] ಷೇರು ವಿನಿಮಯ ಕೇಂದ್ರದಲ್ಲಿ(ಗಳಲ್ಲಿ) ನಮೂದಿಸಲ್ಪಟ್ಟಿದ್ದವು. 2013–14ರ ಸಾಲಿನಲ್ಲಿ ಎರಡು ಹೊಸ ಸಾ.ವ.ಉ.ಗಳು (ಕರ್ನಾಟಕ ವಿಶ್ವಕರ್ಮ

[1] ಪ್ರಕರಣ 619–ಬಿ ಕಂಪನಿಗಳನ್ನು ಒಳಗೊಂಡಿದೆ.

[2] ಹೂಡಿಕೆಯು ಬಂಡವಾಳ ಮತ್ತು ದೀರ್ಘಾವಧಿ ಸಾಲಗಳನ್ನು ಒಳಗೊಂಡಿದೆ.


[3] ಕಾರ್ಯಸ್ಥಗಿತ ಕಂಪನಿಗಳೆಂದರೆ ತಮ್ಮ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿರುವ ಸಾ.ವ.ಉ.ಗಳು.

[4] ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್ ಹಾಗೂ ಮೈಸೂರು ಪೈಂಟ್ಸ್ ಮತ್ತು ವಾರ್ನಿಷ್ ಲಿಮಿಟೆಡ್.

ಕಮ್ಯುನಿಟಿ ಡೆವಲಪ್‌ಮೆಂಟ್ ಕಾರ್ಪೋರೇಶನ್ ಲಿಮಿಟೆಡ್ ಹಾಗೂ ಬೆಂಗಳೂರು ಸಬರ್ಬನ್ ರೇಲ್ ಕಂಪನಿ ಲಿಮಿಟೆಡ್) ಸ್ಥಾಪಿತಗೊಂಡವು. ಒಂದು ಕಂಪನಿಯು (ಕರ್ನಾಟಕ ಎಮ್ಟಾ ಕೋಲರೀಸ್ ಲಿಮಿಟೆಡ್) ಕಂಪನಿಗಳ ವಿಲೇಖನಾಧಿಕಾರಿಗಳ ದಾಖಲೆಗಳಲ್ಲಿ ಕಂಪನಿಯ ಹೆಸರನ್ನು ತೆಗೆದುಹಾಕಲು ಕಾರ್ಪೋರೆಟ್ ವ್ಯವಹಾರಗಳ ಮಂತ್ರಾಲಯಕ್ಕೆ ಅರ್ಜಿ ಸಲ್ಲಿಸಿದೆ (ಮಾರ್ಚ್ 2014).

**1.3** ಕೆಳಗಿನ ರೇಖಾನಕ್ಷೆಯಲ್ಲಿ 31 ಮಾರ್ಚ್ 2009 ಮತ್ತು 31 ಮಾರ್ಚ್ 2014ರಲ್ಲಿದ್ದಂತೆ ವಿವಿಧ ಪ್ರಮುಖ ವಲಯಗಳಲ್ಲಿನ ಹೂಡಿಕೆಗಳು ಮತ್ತು ಅವುಗಳ ಶೇಕಡಾವಾರು ವಿವರಗಳನ್ನು ನೀಡಲಾಗಿದೆ. ಒಟ್ಟು ಹೂಡಿಕೆಗಳ ಪೈಕಿ, ವಿದ್ಯುತ್ ವಲಯದಲ್ಲಿನ ಹೂಡಿಕೆಯು 2008–09ರಲ್ಲಿ ಶೇಕಡ 26.72ರಷ್ಟು ಇದ್ದುದು 2013–14ರಲ್ಲಿ ಶೇಕಡ 39.26ಕ್ಕೆ ಏರಿಕೆಯಾಯಿತು.

**ನಕ್ಷೆ 1.1: ವಿವಿಧ ವಲಯಗಳಲ್ಲಿನ ಹೂಡಿಕೆ**




**(ಅಂಕಣದಲ್ಲಿರುವ ಅಂಕಿಗಳು ಒಟ್ಟು ಹೂಡಿಕೆಗೆ ಶೇಕಡಾವಾರನ್ನು ತೋರಿಸುತ್ತವೆ – ₹ ಕೋಟಿಗಳಲ್ಲಿ)**

## ಲೆಕ್ಕದ ಹೊಣೆಗಾರಿಕೆಯ ರೂಪುರೇಷೆ

**1.4** ಸರ್ಕಾರಿ ಕಂಪನಿಗಳ/ಶಾಸನಬದ್ಧ ನಿಗಮಗಳ ಪ್ರತಿ ಹಣಕಾಸು ವರ್ಷದ ಲೆಕ್ಕಪತ್ರಗಳನ್ನು ಸಂಬಂಧಿತ ಹಣಕಾಸು ವರ್ಷವು ಮುಕ್ತಾಯಗೊಂಡ ಆರು ತಿಂಗಳ ಒಳಗೆ ಅಂದರೆ 30 ಸೆಪ್ಟಂಬರ್ ಒಳಗೆ ಅಂತಿಮಗೊಳಿಸತಕ್ಕದ್ದು.

***ಶಾಸನಬದ್ಧ ಲೆಕ್ಕಪರಿಶೋಧನೆ***

**1.5** ರಾಜ್ಯ ಸರ್ಕಾರಿ ಕಂಪನಿಗಳ (ಕಂಪನಿಗಳ ಅಧಿನಿಯಮ, 1956ರ ಪರಿಚ್ಛೇದ 617ರಲ್ಲಿ ವ್ಯಾಖ್ಯಾನಿಸಿದಂತೆ) ಲೆಕ್ಕಪತ್ರಗಳು, ಕಂಪನಿಗಳ ಅಧಿನಿಯಮ, 1956ರ ಪರಿಚ್ಛೇದ 619(2)ರ ಅನುವುಗಳಂತೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಂದ (ಸಿ.ಎ.ಜಿ.) ನೇಮಿಸಲ್ಪಟ್ಟ ಶಾಸನಬದ್ಧ ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧನೆ ಮಾಡಲ್ಪಡುತ್ತವೆ. ಕಂಪನಿಗಳ ಅಧಿನಿಯಮ, 1956ರ ಪರಿಚ್ಛೇದ 619ರ ಅನುವುಗಳಂತೆ ಈ ಲೆಕ್ಕಪತ್ರಗಳು ಸಿ.ಎ.ಜಿ.ಯವರ ಪೂರಕ ಲೆಕ್ಕಪರಿಶೋಧನೆಗೆ ಕೂಡಾ ಒಳಪಡುತ್ತವೆ.

**1.6** ಶಾಸನಬದ್ಧ ನಿಗಮಗಳ ಲೆಕ್ಕಪರಿಶೋಧನೆಯು ಅವುಗಳ ಸಂಬಂಧಿತ ಶಾಸನಗಳು ಅನುವು ಮಾಡಿರುವ ವಿವಿಧ ನಮೂನೆಗಳನ್ನು ಅನುಸರಿಸುತ್ತದೆ.

- ಶಾಸನಬದ್ಧ ನಿಗಮಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ನಿಗಮ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ ಮತ್ತು ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಿಗೆ ಸಿ.ಎ.ಜಿ. ಏಕಮಾತ್ರ ಲೆಕ್ಕಪರಿಶೋಧಕರಾಗಿರುತ್ತಾರೆ.
- ರಾಜ್ಯ ಹಣಕಾಸು ನಿಗಮಗಳ (ತಿದ್ದುಪಡಿ) ಅಧಿನಿಯಮ 2000ದ ಪ್ರಕಾರ, ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಅನುಮೋದನೆಗೊಂಡ ಪಟ್ಟಿಯಲ್ಲಿರುವ ಹಾಗೂ ನಿಗಮದಿಂದ ನೇಮಕಗೊಂಡಿರುವ ಸನ್ನದು ಲೆಕ್ಕಪರಿಶೋಧಕರಿಂದ ಮಾಡಲ್ಪಡುವ ಲೆಕ್ಕಪರಿಶೋಧನೆಯ ಜೊತೆಗೆ ಸಿ.ಎ.ಜಿ.ಗೆ ಕರ್ನಾಟಕ ರಾಜ್ಯ ಹಣಕಾಸು ನಿಗಮದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ಮಾಡುವ ಅಧಿಕಾರವಿರುತ್ತದೆ.
- ಕರ್ನಾಟಕ ರಾಜ್ಯ ಉಗ್ರಾಣ ನಿಗಮಕ್ಕೆ ಸಂಬಂಧಿಸಿದಂತೆ, ಸಿ.ಎ.ಜಿ.ಯವರೊಂದಿಗೆ ಸಮಾಲೋಚಿಸಿ ರಾಜ್ಯ ಸರ್ಕಾರವು ನೇಮಿಸಿದ ಸನ್ನದು ಲೆಕ್ಕಿಗರು ಮಾಡುವ ಲೆಕ್ಕಪರಿಶೋಧನೆಯ ಜೊತೆಗೆ ಸಿ.ಎ.ಜಿ.ಗೆ ನಿಗಮದ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡುವ ಅಧಿಕಾರವಿರುತ್ತದೆ.

***ಶಾಸಕಾಂಗ ಹಾಗೂ ಸರ್ಕಾರದ ಪಾತ್ರ***

**1.7** ರಾಜ್ಯ ಸರ್ಕಾರವು ತನ್ನ ಆಡಳಿತಾತ್ಮಕ ಇಲಾಖೆಗಳ ಮೂಲಕ ಈ ಸಾ.ವ.ಉ.ಗಳ ವ್ಯವಹಾರಗಳನ್ನು ನಿಯಂತ್ರಿಸುತ್ತದೆ. ಮುಖ್ಯ ಕಾರ್ಯನಿರ್ವಾಹಕ ಮತ್ತು ಆಡಳಿತ ಮಂಡಳಿಯ ನಿರ್ದೇಶಕರನ್ನು ಸರ್ಕಾರವು ನೇಮಕ ಮಾಡುತ್ತದೆ. ಈ ಸಾ.ವ.ಉ.ಗಳ ಲೆಕ್ಕಪತ್ರಗಳು ರಾಜ್ಯ ಸರ್ಕಾರದ ಪರಿಶೀಲನೆಗೆ ಸಹ ಒಳಪಡುತ್ತವೆ.

**1.8** ರಾಜ್ಯ ಶಾಸಕಾಂಗವು ಸಾ.ವ.ಉ.ಗಳಲ್ಲಿ ಸರ್ಕಾರದ ಹೂಡಿಕೆಗಳ ಲೆಕ್ಕ ಇಡುವಿಕೆ ಮತ್ತು ಅದರ ಬಳಕೆಯ ಮೇಲ್ವಿಚಾರಣೆ ಸಹ ಮಾಡುತ್ತದೆ. ಇದಕ್ಕಾಗಿ, ಸರ್ಕಾರಿ ಕಂಪನಿಗಳ ವಾರ್ಷಿಕ ವರದಿಯೊಂದಿಗೆ ಶಾಸನಬದ್ಧ ಲೆಕ್ಕಪರಿಶೋಧಕರ ವರದಿ ಹಾಗೂ ಸಿ.ಎ.ಜಿ.ಯವರ ಟೀಕೆಗಳನ್ನು ಮತ್ತು ಶಾಸನಬದ್ಧ ನಿಗಮಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಯನ್ನು ಸಂಬಂಧಿತ ಅಧಿನಿಯಮಗಳ ಅನ್ವಯ ಶಾಸಕಾಂಗದ ಮುಂದೆ ಮಂಡಿಸಲಾಗುತ್ತದೆ. ಸಿ.ಎ.ಜಿ. (ಕರ್ತವ್ಯಗಳು, ಅಧಿಕಾರ ಮತ್ತು ಸೇವಾಷರತ್ತುಗಳು) ಅಧಿನಿಯಮ, 1971ರ ಪರಿಚ್ಛೇದ 19ಎ ಅಡಿಯಲ್ಲಿ ಸಿ.ಎ.ಜಿ.ಯವರ ಲೆಕ್ಕಪರಿಶೋಧನಾ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ.

**ಕರ್ನಾಟಕ ಸರ್ಕಾರದ ಪಾಲು**

**1.9** ಸಾ.ವ.ಉ.ಗಳಲ್ಲಿ ಕರ್ನಾಟಕ ಸರ್ಕಾರದ ಹಣಕಾಸಿನ ಪಾಲು ಪ್ರಮುಖವಾಗಿ ಮೂರು ರೀತಿಯಲ್ಲಿ ಇರುತ್ತದೆ:

- ಷೇರು ಬಂಡವಾಳ ಮತ್ತು ಸಾಲಗಳು– ಷೇರು ಬಂಡವಾಳ ಕೊಡುಗೆಯ ಜೊತೆಗೆ ಕರ್ನಾಟಕ ಸರ್ಕಾರವು ಸಾ.ವ.ಉ.ಗಳಿಗೆ ಕಾಲಕಾಲಕ್ಕೆ ಸಾಲದ ರೂಪದಲ್ಲಿ ಸಹ ಹಣಕಾಸಿನ ಸಹಾಯವನ್ನು ಒದಗಿಸುತ್ತದೆ.

- ವಿಶೇಷ ಹಣಕಾಸಿನ ಬೆಂಬಲ– ಕರ್ನಾಟಕ ಸರ್ಕಾರವು ಸಾ.ವ.ಉ.ಗಳಿಗೆ ಅಗತ್ಯ ಕಂಡು ಬಂದಂತೆಲ್ಲಾ ಆಯವ್ಯಯದ ಮೂಲಕ ಅನುದಾನಗಳು ಮತ್ತು ಸಹಾಯಧನಗಳ ರೂಪದಲ್ಲಿ ಬೆಂಬಲವನ್ನು ಒದಗಿಸುತ್ತದೆ.

- ಖಾತರಿಗಳು– ಸಾ.ವ.ಉ.ಗಳು ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳ ಮರುಪಾವತಿ ಹಾಗೂ ಬಡ್ಡಿಯ ಪಾವತಿಗೆ ಕರ್ನಾಟಕ ಸರ್ಕಾರವು ಖಾತರಿಯನ್ನು ಸಹ ನೀಡುತ್ತದೆ.

**1.10** 31 ಮಾರ್ಚ್ 2014ರಲ್ಲಿದ್ದಂತೆ, 95 ಸಾ.ವ.ಉ.ಗಳಲ್ಲಿ (619 ಬಿ ಕಂಪನಿಗಳು ಸೇರಿದಂತೆ) ಹೂಡಿಕೆಯು (ಬಂಡವಾಳ ಮತ್ತು ದೀರ್ಘಾವಧಿ ಸಾಲಗಳು) ಕೆಳಗೆ ನೀಡಿರುವ ವಿವರಣೆಗಳಂತೆ ₹ 75,051.46 ಕೋಟಿಯಷ್ಟಿತ್ತು.

**ಕೋಷ್ಟಕ 1.2: ಸಾ.ವ.ಉ.ಗಳಲ್ಲಿ ಹೂಡಿಕೆಗಳು (ಬಂಡವಾಳ ಮತ್ತು ದೀರ್ಘಾವಧಿ ಸಾಲಗಳು)**


**(₹ ಕೋಟಿಗಳಲ್ಲಿ)**

| ಪಂಗಡ | ಸರ್ಕಾರಿ ಕಂಪನಿಗಳು | | | ಶಾಸನಬದ್ಧ ನಿಗಮಗಳು | | | ಒಟ್ಟು ಮೊತ್ತ |
|---|---|---|---|---|---|---|---|
| | ಬಂಡವಾಳ | ದೀರ್ಘಾವಧಿ ಸಾಲಗಳು | ಒಟ್ಟು | ಬಂಡವಾಳ | ಧೀರ್ಘಾವಧಿ ಸಾಲಗಳು | ಒಟ್ಟು | |
| ಕಾರ್ಯನಿರತ ಸಾ.ವ.ಉ.ಗಳು | 45,589.05 | 24,290.96 | 68,880.01 | 1,867.06 | 3,703.83 | 5,570.89 | **74,450.90** |
| ಕಾರ್ಯಸ್ಥಗಿತ ಸಾ.ವ.ಉ.ಗಳು | 161.35 | 439.21 | 600.56 | – | – | – | **600.56** |
| ಒಟ್ಟು | **44,750.40** | **24,730.17** | **69,480.57** | **1,867.06** | **3,703.83** | **5,570.89** | **75,051.46** |

ಸಾ.ವ.ಉ.ಗಳಲ್ಲಿ ಸರ್ಕಾರದ ಹೂಡಿಕೆಯ ಸಂಕ್ಷಿಪ್ತ ಸ್ಥಿತಿಯನ್ನು **ಅನುಬಂಧ 1**ರಲ್ಲಿ ವಿವರಿಸಲಾಗಿದೆ.

**1.11** 31 ಮಾರ್ಚ್ 2014ರಲ್ಲಿದ್ದಂತೆ, ಸಾ.ವ.ಉ.ಗಳಲ್ಲಿನ ಒಟ್ಟು ಹೂಡಿಕೆಗಳ ಪೈಕಿ ಶೇಕಡ 99.20ರಷ್ಟು ಕಾರ್ಯನಿರತ ಸಾ.ವ.ಉ.ಗಳಲ್ಲಿ ಹಾಗೂ ಉಳಿದ ಶೇಕಡ 0.80ರಷ್ಟು ಕಾರ್ಯಸ್ಥಗಿತ ಸಾ.ವ.ಉ.ಗಳಲ್ಲಿ ಇತ್ತು. ಒಟ್ಟು ಹೂಡಿಕೆಯು ಶೇಕಡ 62.11ರಷ್ಟು ಬಂಡವಾಳವನ್ನು ಹಾಗೂ ಶೇಕಡ 37.89ರಷ್ಟು ದೀರ್ಘಾವಧಿ ಸಾಲಗಳನ್ನು ಒಳಗೊಂಡಿತ್ತು. ಈ ಕೆಳಗಿನ ರೇಖಾಚಿತ್ರದಲ್ಲಿ ತೋರಿಸಿರುವಂತೆ, ಈ ಹೂಡಿಕೆಯು 2008–09ರಲ್ಲಿನ ₹ 48,565.22 ಕೋಟಿಯಿಂದ, 2013–14ರಲ್ಲಿ ₹ 75,051.46 ಕೋಟಿಗೆ, ಶೇಕಡ 54.53ರಷ್ಟು ಬೆಳೆದಿತ್ತು:

**ನಕ್ಷೆ 1.2: ಕಳೆದ ಆರು ವರ್ಷಗಳಲ್ಲಿ ಸಾ.ವ.ಉ.ಗಳಲ್ಲಿನ ಹೂಡಿಕೆ**




**1.12** 2008–2014ರ ಅವಧಿಯಲ್ಲಿ ಬಂಡವಾಳ ಹೂಡಿಕೆ ಹಾಗೂ ದೀರ್ಘಾವಧಿ ಸಾಲಗಳು ಅನುಕ್ರಮವಾಗಿ ₹ 22,139.79 ಕೋಟಿ ಮತ್ತು ₹ 4,346.45 ಕೋಟಿಯಷ್ಟು ಏರಿಕೆಯಾಗಿದ್ದಿತು. ಈ ಅವಧಿಯಲ್ಲಿ ಹೂಡಿಕೆಯಲ್ಲಿನ ಒಟ್ಟಾರೆ ನಿವ್ವಳ ಏರಿಕೆಯು ₹ 26,486.24 ಕೋಟಿಯಷ್ಟಿತ್ತು.

**1.13** ಇತ್ತೀಚಿಗೆ ಅಂತಿಮಗೊಂಡ ರಾಜ್ಯ ಸಾ.ವ.ಉ.ಗಳ ಲೆಕ್ಕಪತ್ರಗಳ ಪ್ರಕಾರ ಬಂಡವಾಳ ಹೂಡಿಕೆಯು ₹ 42,268.70 ಕೋಟಿ ಮತ್ತು ಸಂಚಯಿತ ಲಾಭಗಳು ₹ 1,894.94 ಕೋಟಿಯಷ್ಟಿತ್ತು.

## ಸಾರ್ವಜನಿಕ ವಲಯ ಉದ್ಯಮಗಳಿಗೆ ಆಯವ್ಯಯ ಬೆಂಬಲ

**1.14** ಸಾ.ವ.ಉ.ಗಳ ಈಕ್ವಿಟಿಗೆ, ಸಾಲಗಳಿಗೆ, ಅನುದಾನಗಳಿಗೆ/ಸಹಾಯಧನಗಳಿಗೆ, ಖಾತರಿ ನೀಡಿಕೆಗೆ, ಸಾಲಗಳನ್ನು ತೊಡೆದು ಹಾಕಲು, ಸಾಲವನ್ನು ಈಕ್ವಿಟಿಯಾಗಿ ಪರಿವರ್ತಿಸಲು ಮತ್ತು ಬಡ್ಡಿಯ ಮನ್ನಾಗಾಗಿ ಆಯವ್ಯಯದ ಹೊರಹರಿವಿನ ವಿವರಗಳನ್ನು **ಅನುಬಂಧ–2**ರಲ್ಲಿ ನೀಡಲಾಗಿದೆ. 2013–14ಕ್ಕೆ ಕೊನೆಗೊಂಡಂತೆ ಮೂರು ವರ್ಷಗಳ ಸಂಕ್ಷಿಪ್ತ ವಿವರಗಳನ್ನು ಈ ಕೆಳಗೆ ನೀಡಲಾಗಿದೆ:

**ಕೋಷ್ಟಕ 1.3: ಸಾ.ವ.ಉ.ಗಳಿಗೆ ಆಯವ್ಯಯದ ಬೆಂಬಲದ ವಿವರಗಳು**


**(ಮೊತ್ತ: ₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ವಿವರಗಳು | 2011–12 | | 2012–13 | | 2013–14 | |
|---|---|---|---|---|---|---|---|
| | | ಸಾವಉಗಳ ಸಂಖ್ಯೆ | ಮೊತ್ತ | ಸಾವಉಗಳ ಸಂಖ್ಯೆ | ಮೊತ್ತ | ಸಾವಉಗಳ ಸಂಖ್ಯೆ | ಮೊತ್ತ |
| 1 | ಆಯವ್ಯಯದಿಂದ ಈಕ್ವಿಟಿ ಬಂಡವಾಳಕ್ಕೆ ಹೊರಹರಿವು | 19 | 4,442.57 | 23 | 4,660.59 | 21 | 4,078.15 |
| 2 | ಆಯವ್ಯಯದಿಂದ ಸಾಲಗಳನ್ನು ನೀಡಿದ್ದು | 2 | 46.60 | 3 | 11.08 | 3 | 67.55 |
| 3 | ಸ್ವೀಕರಿಸಿದ ಅನುದಾನಗಳು/ ಸಹಾಯಧನಗಳು | 34 | 7,364.64 | 36 | 10,387.06 | 32 | 9,365.95 |
| **4** | **ಒಟ್ಟು ಹೊರಹರಿವು (ಕ್ರ.ಸಂ.1 + ಕ್ರ.ಸಂ.2 + ಕ್ರ.ಸಂ.3)[5]** | **42** | **11,853.81** | **51** | **15,058.73** | **42** | **13,511.65** |
| 5 | ಖಾತರಿ ಕಮಿಷನನ್ನು ಈಕ್ವಿಟಿಯಾಗಿ ಪರಿವರ್ತಿಸಿದ್ದು | 7 | 148.27 | 1 | 101.50 | – | – |
| 6 | ಸಾಲಗಳನ್ನು ಮನ್ನಾ ಮಾಡಿದ್ದು | – | – | – | – | – | – |
| 7 | ಖಾತರಿ ಕಮಿಷನನ್ನು ವಜಾ ಮಾಡಿದ್ದು | – | – | 1 | 2.19 | – | – |
| 8 | ನೀಡಲಾಗಿದ್ದ ಖಾತರಿಗಳು | 7 | 920.72 | 7 | 557.19 | 12 | 1,755.65 |
| 9 | ಖಾತರಿ ಬದ್ಧತೆ | 19 | 3,353.86 | 20 | 3,500.88 | 21 | 4,542.73 |

**1.15** ಕಳೆದ ಆರು ವರ್ಷಗಳಿಗೆ ಸಂಬಂಧಿಸಿದಂತೆ ಈಕ್ವಿಟಿ, ಸಾಲಗಳು ಮತ್ತು ಅನುದಾನಗಳು/ಸಹಾಯಧನಗಳಿಗಾಗಿ ಆಯವ್ಯಯದ ಹೊರಹರಿವಿನ ವಿವರಗಳನ್ನು ಈ ಕೆಳಗಿನ ರೇಖಾಚಿತ್ರದಲ್ಲಿ ನೀಡಲಾಗಿದೆ:

[5] ಸಾ.ವ.ಉ.ಗಳ ನೈಜ ಸಂಖ್ಯೆಯನ್ನು ಸೂಚಿಸುತ್ತದೆ.

**ನಕ್ಷೆ 1.3: ಈಕ್ವಿಟಿ, ಸಾಲಗಳು ಮತ್ತು ಅನುದಾನಗಳು/ಸಹಾಯಧನಗಳಿಗಾಗಿ ಆಯವ್ಯಯದ ಹೊರಹರಿವು**




ಈಕ್ವಿಟಿ, ಸಾಲಗಳು ಮತ್ತು ಅನುದಾನ/ಸಹಾಯಧನಗಳಿಗೆ ಆಯವ್ಯಯದ ಬೆಂಬಲವು 2008–09ರಲ್ಲಿದ್ದ ₹ 6,876.14 ಕೋಟಿಯಿಂದ 2012–13ರಲ್ಲಿ ₹ 15,058.73 ಕೋಟಿಗೆ ಹೆಚ್ಚಳಗೊಂಡಿದ್ದಿತು ಹಾಗೂ 2013–14 ರಲ್ಲಿ ₹ 13,511.65 ಕೋಟಿಗೆ ಇಳಿಕೆಯಾಯಿತು.

**ಸಾಲಗಳಿಗೆ ಖಾತರಿಗಳು ಮತ್ತು ಬಾಕಿಯಿರುವ ಖಾತರಿ ಕಮಿಷನ್**

**1.16** ಕರ್ನಾಟಕ ಖಾತರಿಗಳ ಗರಿಷ್ಠ ಪರಿಮಿತಿ ಅಧಿನಿಯಮ, 1999 (2002ರ ಕಾಯಿದೆ 15ರಲ್ಲಿ ತಿದ್ದುಪಡಿಯಾದಂತೆ)ರ ಪರಿಚ್ಛೇದ 5(1)ರ ಅನ್ವಯ ಏಪ್ರಿಲ್ 2001 ರಿಂದ ಅನ್ವಯವಾಗುವಂತೆ ಸರ್ಕಾರವು ಖಾತರಿ ಕಮಿಷನ್ನನ್ನು ಕನಿಷ್ಠ ಶೇಕಡಾ ಒಂದರಷ್ಟು ವಿಧಿಸಬೇಕಿತ್ತು ಹಾಗೂ ಈ ಕಮಿಷನನ್ನು ಯಾವುದೇ ಸಂದರ್ಭಗಳಲ್ಲಿಯೂ ಮನ್ನಾ ಮಾಡುವಂತಿರಲಿಲ್ಲ. 2013–14ರಲ್ಲಿ ಸಾ.ವ.ಉ.ಗಳು ₹ 27.20 ಕೋಟಿ ಖಾತರಿ ಕಮಿಷನನ್ನು ಪಾವತಿಸಿದ್ದವು. ಎಲ್ಲಾ ಸಾ.ವ.ಉ.ಗಳಿಂದ ಸರ್ಕಾರಕ್ಕೆ ಪಾವತಿಸಲು ಬಾಕಿ ಉಳಿದಿದ್ದ ಖಾತರಿ ಕಮಿಷನ್ನಿನ ಮೊತ್ತವು ₹ 79.78 ಕೋಟಿ ಆಗಿದ್ದಿತು. ದೊಡ್ಡ ಮೊತ್ತಗಳಲ್ಲಿ ಬಾಕಿಗಳನ್ನು ಹೊಂದಿದ್ದ ಸಾ.ವ.ಉ.ಗಳೆಂದರೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ (₹ 40.76 ಕೋಟಿ) ಕರ್ನಾಟಕ ನೀರಾವರಿ ನಿಗಮ ನಿಯಮಿತ (₹ 20.29 ಕೋಟಿ).

**ಸಾ.ವ.ಉ.ಗಳಲ್ಲಿ ಹೂಡಿಕೆಗಳ ನಿಖರವಾದ ಅಂಕಿಅಂಶಗಳ ಅಲಭ್ಯತೆ**

**1.17** ರಾಜ್ಯದ ಸಾ.ವ.ಉ.ಗಳ ದಾಖಲೆಗಳಂತೆ ಇರುವ ಈಕ್ವಿಟಿ, ಸಾಲಗಳು ಮತ್ತು ಖಾತರಿಗಳು ಬಾಕಿ ಇರುವ ಅಂಕಿಅಂಶಗಳು ರಾಜ್ಯದ ಹಣಕಾಸು ಲೆಕ್ಕಪತ್ರಗಳಲ್ಲಿನ ಅಂಕಿಅಂಶಗಳೊಂದಿಗೆ ತಾಳೆ ಹೊಂದಬೇಕು. ಒಂದು ವೇಳೆ ತಾಳೆ ಹೊಂದದಿದ್ದಲ್ಲಿ, ಸಂಬಂಧಪಟ್ಟ ಸಾ.ವ.ಉ.ಗಳು ಮತ್ತು ಆರ್ಥಿಕ ಇಲಾಖೆಯು ವ್ಯತ್ಯಾಸಗಳನ್ನು ಸಮನ್ವಯಗೊಳಿಸಬೇಕು. ಇದಕ್ಕೆ ಸಂಬಂಧಿಸಿದಂತೆ 31 ಮಾರ್ಚ್ 2014ರ ಸ್ಥಿತಿಯನ್ನು ಈ ಕೆಳಗೆ ತಿಳಿಸಲಾಗಿದೆ:

**ಕೋಷ್ಟಕ 1.4: ಹಣಕಾಸು ಲೆಕ್ಕಪತ್ರಗಳು ಹಾಗೂ ಸಾ.ವ.ಉ.ಗಳ ದಾಖಲೆಗಳ ಪ್ರಕಾರ ಬಾಕಿ ಇರುವ ಈಕ್ವಿಟಿ ಸಾಲಗಳು ಮತ್ತು ಖಾತರಿಗಳು**

**(₹ ಕೋಟಿಗಳಲ್ಲಿ)**

| ಈ ಕೆಳಗಿನವುಗಳಿಗೆ ಸಂಬಂಧಿಸಿದಂತೆ ಬಾಕಿ ಇರುವುದು | ಹಣಕಾಸು ಲೆಕ್ಕಪತ್ರಗಳ ಪ್ರಕಾರ ಮೊತ್ತ | ಸಾ.ವ.ಉ.ಗಳ ದಾಖಲೆಗಳ ಪ್ರಕಾರ ಮೊತ್ತ | ವ್ಯತ್ಯಾಸ |
|---|---|---|---|
| 1 | 2 | 3 | 4=2–3 |
| ಈಕ್ವಿಟಿ | 49,070.50 | 44,503.50 | 4,567.00 |
| ಸಾಲಗಳು | 1,647.85 | 1,463.94 | 183.91 |
| ಖಾತರಿಗಳು | 5,023.75 | 4,542.73[6] | 481.02 |

**1.18** 81 ಸಾ.ವ.ಉ.ಗಳಿಗೆ ಸಂಬಂಧಿಸಿದಂತೆ ವ್ಯತ್ಯಾಸಗಳಾಗಿರುವುದನ್ನು ನಾವು ಗಮನಿಸಿದೆವು. ಸರ್ಕಾರ ಮತ್ತು ಸಾ.ವ.ಉ.ಗಳು ವ್ಯತ್ಯಾಸಗಳನ್ನು ಒಂದು ಕಾಲಮಿತಿಯೊಳಗೆ ಸಮನ್ವಯಗೊಳಿಸಲು ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳಬೇಕು.

## ಲೆಕ್ಕಪತ್ರಗಳನ್ನು ಅಂತಿಮಗೊಳಿಸುವಲ್ಲಿ ಬಾಕಿ

**1.19** ಕಂಪನಿಗಳ ಅಧಿನಿಯಮ, 1956ರ ಪರಿಚ್ಛೇದಗಳು 166, 210, 230, 619 ಮತ್ತು 619–ಬಿ ಪ್ರಕಾರ, ಕಂಪನಿಗಳು ಪ್ರತಿ ಹಣಕಾಸು ವರ್ಷದ ಲೆಕ್ಕಪತ್ರಗಳನ್ನು ಸಂಬಂಧಿತ ಹಣಕಾಸು ವರ್ಷವು ಅಂತ್ಯಗೊಂಡ ದಿನಾಂಕದಿಂದ ಆರು ತಿಂಗಳ ಒಳಗೆ ಅಂತಿಮಗೊಳಿಸಬೇಕು. ಅದೇ ರೀತಿ, ಶಾಸನಬದ್ಧ ನಿಗಮಗಳ ಲೆಕ್ಕಪತ್ರಗಳು ಸಂಬಂಧಿತ ಅಧಿನಿಯಮಗಳ ಪ್ರಕಾರ ಅಂತಿಮಗೊಳಿಸಲ್ಪಟ್ಟು, ಲೆಕ್ಕಪರಿಶೋಧನೆಗೊಳಪಟ್ಟು ವಿಧಾನಮಂಡಲದಲ್ಲಿ ಮಂಡಿಸಲ್ಪಡುತ್ತವೆ. ಸೆಪ್ಟಂಬರ್ 2014ರ ವೇಳೆಗೆ ಕಾರ್ಯನಿರತ ಸಾ.ವ.ಉ.ಗಳ ಲೆಕ್ಕಪತ್ರಗಳನ್ನು ಅಂತಿಮಗೊಳಿಸುವಿಕೆಯ ಪ್ರಗತಿಯ ವಿವರಗಳನ್ನು ಈ ಕೆಳಗಿನ ಕೋಷ್ಟಕವು ನೀಡುತ್ತದೆ:

**ಕೋಷ್ಟಕ 1.5: ಕಾರ್ಯನಿರತ ಸಾ.ವ.ಉ.ಗಳ ಲೆಕ್ಕಪತ್ರಗಳನ್ನು ಅಂತಿಮಗೊಳಿಸುವುದಕ್ಕೆ ಸಂಬಂಧಿಸಿದ ಸ್ಥಿತಿ**

| ಕ್ರಮ ಸಂಖ್ಯೆ | ವಿವರಗಳು | 2009–10 | 2010–11 | 2011–12 | 2012–13 | 2013–14 |
|---|---|---|---|---|---|---|
| 1 | ಕಾರ್ಯನಿರತ ಸಾ.ವ.ಉ.ಗಳು ಹಾಗೂ ಶಾಸನಬದ್ಧ ನಿಗಮಗಳ ಸಂಖ್ಯೆ | 75 | 75 | 76 | 79 | 81 |
| 2 | ಪ್ರಸಕ್ತ ಸಾಲಿನಲ್ಲಿ ಅಂತಿಮಗೊಳಿಸಲಾದ ಲೆಕ್ಕಪತ್ರಗಳ ಸಂಖ್ಯೆ | 73 | 69 | 59 | 81 | 73 |
| 3 | ಬಾಕಿ ಇರುವ ಲೆಕ್ಕಪತ್ರಗಳ ಸಂಖ್ಯೆ | 20 | 25 | 42 | 40 | 48 |
| 4 | ಪ್ರತೀ ಸಾ.ವ.ಉ.ಕ್ಕೆ ಸಂಬಂಧಿಸಿದಂತೆ ಇರುವ ಸರಾಸರಿ ಬಾಕಿ (3/1) | 0.27 | 0.33 | 0.55 | 0.51 | 0.56 |
| 5 | ಲೆಕ್ಕಪತ್ರಗಳು ಬಾಕಿ ಇರುವ ಕಾರ್ಯನಿರತ ಸಾ.ವ.ಉ.ಗಳ ಸಂಖ್ಯೆ | 20 | 24 | 37 | 36 | 41 |
| 6 | ಬಾಕಿಗಳ ವ್ಯಾಪ್ತಿ | 1 ವರ್ಷ | 1 ರಿಂದ 2 ವರ್ಷಗಳು | 1 ರಿಂದ 2 ವರ್ಷಗಳು | 1 ರಿಂದ 2 ವರ್ಷಗಳು | 1 ರಿಂದ 3 ವರ್ಷಗಳು |

[6] ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ಹಾಗೂ ದಿ ಮೈಸೂರು ಸಕ್ಕರೆ ಕಂಪನಿ ನಿಯಮಿತಗಳಿಗೆ ನೀಡಿರುವ ಖಾತರಿಗಳನ್ನು ಒಳಗೊಂಡಿಲ್ಲ.

**1.20** ಕಾರ್ಯನಿರತ ಸಾ.ವ.ಉ.ಗಳು ತಮ್ಮ ಲೆಕ್ಕಪತ್ರಗಳನ್ನು ಅಂತಿಮಗೊಳಿಸುವ ಬಾಕಿಯು ಸೆಪ್ಟೆಂಬರ್ 2010ರ ಅಂತ್ಯಕ್ಕೆ 20 ಇದ್ದದ್ದು, ಸೆಪ್ಟೆಂಬರ್ 2014ರ ಅಂತ್ಯಕ್ಕೆ 41ಕ್ಕೆ ಹೆಚ್ಚಳಗೊಂಡಿತು. ಇದು ಲೆಕ್ಕಪತ್ರಗಳನ್ನು ಅಂತಿಮಗೊಳಿಸುವಲ್ಲಿ[7] ನಿಕೃಷ್ಟ ಕಾರ್ಯಸಾಧನೆಯನ್ನು ಸೂಚಿಸುತ್ತಿತ್ತು.

**1.21** ಕಾರ್ಯಸ್ಥಗಿತ ಸಾ.ವ.ಉ.ಗಳು ಲೆಕ್ಕಪತ್ರಗಳನ್ನು ಅಂತಿಮಗೊಳಿಸುವಲ್ಲಿನ ಬಾಕಿಗಳಿಗೆ ಸಂಬಂಧಿಸಿದಂತೆ, 14 ಕಾರ್ಯಸ್ಥಗಿತ ಸಾ.ವ.ಉ.ಗಳ ಪೈಕಿ ಏಳು[8] ಸಾ.ವ.ಉ.ಗಳ ಸಮಾಪನ ಪ್ರಕ್ರಿಯೆಯು ಪ್ರಗತಿಯಲ್ಲಿದ್ದಿತು. ಈ ಕಂಪನಿಗಳು ಅಂತಿಮಗೊಳಿಸಲು ಬಾಕಿಯಿದ್ದ ಲೆಕ್ಕಪತ್ರಗಳು ಏಳರಿಂದ ಹನ್ನೊಂದು ವರ್ಷಗಳ ವ್ಯಾಪ್ತಿಯಲ್ಲಿದ್ದವು. ಕಂಪನಿಗಳ ಅಧಿನಿಯಮ, 1956ರ ಪರಿಚ್ಛೇದ 446ಎ ಅಡಿಯಲ್ಲಿ, ಈ ಕಂಪನಿಗಳು ಕಡಿತಗೊಂಡ ಅವಧಿಗೆ ಲೆಕ್ಕಪತ್ರಗಳನ್ನು ಅಂತಿಮಗೊಳಿಸುವ ಅಗತ್ಯವಿದೆ. ಉಳಿದ ಏಳು ಸಾ.ವ.ಉ.ಗಳ ಪೈಕಿ, ಆರು ಸಾ.ವ.ಉ.ಗಳು 2013–14ರ ತಮ್ಮ ಲೆಕ್ಕಪತ್ರಗಳನ್ನು ಸೆಪ್ಟಂಬರ್ 2014ರ[9] ವೇಳೆಗೆ ಅಂತಿಮಗೊಳಿಸಿದ್ದವು ಮತ್ತು ಒಂದು ಸಾ.ವ.ಉ.ಕ್ಕೆ ಸಂಬಂಧಿಸಿದಂತೆ 2013–14ರ ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆ ಬಾಕಿಯಿತ್ತು.

**1.22** 30 ಸೆಪ್ಟಂಬರ್ 2014ರಲ್ಲಿದ್ದಂತೆ ತಮ್ಮ ಲೆಕ್ಕಪತ್ರಗಳನ್ನು ಅಂತಿಮಗೊಳಿಸದಿದ್ದ 41 ಸಾ.ವ.ಉ.ಗಳಲ್ಲಿ ರಾಜ್ಯ ಸರ್ಕಾರವು ಆ ವರ್ಷಗಳಲ್ಲಿ ₹ 10,601.48 ಕೋಟಿಯಷ್ಟು ಮೊತ್ತವನ್ನು (ಈಕ್ವಿಟಿ: ₹ 3,350.50 ಕೋಟಿ; ಅನುದಾನಗಳು: ₹ 2,445.87 ಕೋಟಿ ಮತ್ತು ಸಹಾಯಧನ ₹ 4,805.11 ಕೋಟಿ) **ಅನುಬಂಧ 3**ರಲ್ಲಿ ವಿವರಿಸಿರುವಂತೆ ಹೂಡಿಕೆ ಮಾಡಿತ್ತು.

**ಲೆಕ್ಕಪತ್ರಗಳನ್ನು ಅಂತಿಮಗೊಳಿಸದಿದ್ದುದರ ಪರಿಣಾಮ**

**1.23** ಲೆಕ್ಕಪತ್ರಗಳನ್ನು 30 ಸೆಪ್ಟೆಂಬರ್‌ರೊಳಗೆ ಅಂತಿಮ ರೂಪಕ್ಕೆ ತರದಿದ್ದಲ್ಲಿ, ಅದು ಕಂಪನಿಗಳ ಅಧಿನಿಯಮ, 1956ರ ಅನುವುಗಳ ಉಲ್ಲಂಘನೆಯಾಗುತ್ತದೆ.

**1.24** ಲೆಕ್ಕಪತ್ರಗಳು ಹಾಗೂ ತದನಂತರದ ಅವುಗಳ ಲೆಕ್ಕಪರಿಶೋಧನೆಯ ಅಲಭ್ಯತೆಯ ಸ್ಥಿತಿಯಲ್ಲಿ, ಹೂಡಿಕೆಗಳು ಮತ್ತು ಭರಿಸಲಾದ ವೆಚ್ಚಗಳನ್ನು ಲೆಕ್ಕಪತ್ರಗಳಲ್ಲಿ ಸೂಕ್ತವಾಗಿ ತೆಗೆದುಕೊಳ್ಳಲಾಗಿದೆ ಎಂಬುದಕ್ಕೆ ಹಾಗೂ ಹೂಡಿಕೆಯನ್ನು ಯಾವ ಉದ್ದೇಶಕ್ಕಾಗಿ ಮಾಡಲಾಗಿದ್ದಿತೋ ಆ ಉದ್ದೇಶವು ಈಡೇರಿದೆ ಎನ್ನುವುದಕ್ಕೆ ಭರವಸೆ ಇರುವುದಿಲ್ಲ ಮತ್ತು ಈ ರೀತಿಯಾಗಿ ಅಂತಹ ಸಾ.ವ.ಉ.ಗಳಲ್ಲಿ ಮಾಡಲಾದ ಸರ್ಕಾರದ ಹೂಡಿಕೆಯು ರಾಜ್ಯ ಶಾಸಕಾಂಗದ ಪರಿಶೀಲನೆಯಿಂದ ಹೊರಗುಳಿಯುತ್ತದೆ.

**1.25** ಮುಂದುವರೆದು, ಲೆಕ್ಕಪತ್ರಗಳನ್ನು ಅಂತಿಮಗೊಳಿಸುವುದರಲ್ಲಿನ ವಿಳಂಬವು ಕಂಪನಿಗಳ ಅಧಿನಿಯಮ, 1956ರ ಪರಿಚ್ಛೇದಗಳ ಉಲ್ಲಂಘನೆಯಾಗುತ್ತದೆಯಲ್ಲದೆ ಸಾರ್ವಜನಿಕ ಹಣಕಾಸಿನ ವಂಚನೆ ಮತ್ತು ಸೋರಿಕೆಯ ಸಂಭಾವ್ಯ ಅಪಾಯದಲ್ಲಿಯೂ ಪರಿಣಮಿಸಬಹುದು. ಮೇಲೆ ತಿಳಿಸಲಾದ ಬಾಕಿಗಳ ಪರಿಸ್ಥಿತಿಯಲ್ಲಿ, 2013–14ರ ಸಾಲಿನಲ್ಲಿ ಈ ಸಾ.ವ.ಉ.ಗಳು ರಾಜ್ಯದ ಒಟ್ಟಾರೆ ಆಂತರಿಕ/ದೇಶೀಯ ಉತ್ಪನ್ನಕ್ಕೆ (ಜಿಡಿಪಿ) ನೀಡಿದ ವಾಸ್ತವಿಕ ಕೊಡುಗೆಯನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ. ಆದಾಗ್ಯೂ, ಇತ್ತೀಚೆಗೆ ಅಂತಿಮ ರೂಪಕ್ಕೆ ತರಲಾದ ಲೆಕ್ಕಪತ್ರಗಳ ಪ್ರಕಾರ ರಾಜ್ಯದ ಒಟ್ಟಾರೆ ಆಂತರಿಕ/ದೇಶೀಯ ಉತ್ಪನ್ನಕ್ಕೆ ಸಾ.ವ.ಉ.ಗಳು ನೀಡಿದ ಕೊಡುಗೆಯ ಶೇಕಡಾ 7.46ರಷ್ಟು ಆಗಿತ್ತು.

---

[7] ಅಕ್ಟೋಬರ್ ಹಾಗೂ ನವೆಂಬರ್ 2014ರ ನಡುವೆ 15 ಸಾ.ವ.ಉ.ಗಳು 15 ಲೆಕ್ಕಪತ್ರಗಳನ್ನು ಅಂತಿಮಗೊಳಿಸಿದ್ದವು. ನವೆಂಬರ್ 2014ರ ಅಂತ್ಯಕ್ಕೆ 28 ಕಾರ್ಯನಿರತ ಸಾ.ವ.ಉ.ಗಳ 33 ಲೆಕ್ಕಪತ್ರಗಳು ಅಂತಿಮಗೊಳಿಸಲು ಬಾಕಿಯಿದ್ದವು.

[8] ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಕಂಪನಿ ನಿಯಮಿತ, ಎನ್‌ಜಿಇಎಫ್ ನಿಯಮಿತ, ಕರ್ನಾಟಕ ಟೆಲಿಕಾಮ್ ನಿಯಮಿತ, ಮೈಸೂರು ಕಾಸ್ಮೆಟಿಕ್ಸ್ ನಿಯಮಿತ, ಕರ್ನಾಟಕ ರಾಜ್ಯ ವಿನೀರ್ಸ್ ನಿಯಮಿತ, ಚಾಮುಂಡಿ ಮೆಶೀನ್ ಟೂಲ್ಸ್ ನಿಯಮಿತ ಮತ್ತು ಕರ್ನಾಟಕ ರಾಜ್ಯ ಜವಳಿ ನಿಯಮಿತ.

[9] ಒಂದು ಸಾ.ವ.ಉ. ಯಾವುದೆಂದರೆ ವಿ.ಎಸ್.ಎಲ್. ತನ್ನ 2013–14ರ ಲೆಕ್ಕಪತ್ರಗಳನ್ನು ಅಕ್ಟೋಬರ್ 2014ರಲ್ಲಿ ಅಂತಿಮಗೊಳಿಸಿತ್ತು.

**1.26** ಈ ಸಂಸ್ಥೆಗಳ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡುವ ಜವಾಬ್ದಾರಿಯು ಆಡಳಿತಾತ್ಮಕ ಇಲಾಖೆಗಳದ್ದಾಗಿರುತ್ತದೆ. ಈ ಸಾ.ವ.ಉ.ಗಳು ನಿರ್ದಿಷ್ಟ ಅವಧಿಯ ಒಳಗೆ ಲೆಕ್ಕಪತ್ರಗಳನ್ನು ಅಂತಿಮಗೊಳಿಸಿ ಅಳವಡಿಸಿಕೊಳ್ಳುತ್ತವೆಂಬುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು.

## ಸಾ.ವ.ಉ.ಗಳ ಕಾರ್ಯಸಾಧನೆ

***ಕಾರ್ಯಸಾಧನೆಯನ್ನು ನಿರ್ಧಾರಣೆ ಮಾಡುವಲ್ಲಿನ ಅಡಚಣೆಗಳು***

**1.27** ಲೆಕ್ಕಪತ್ರಗಳನ್ನು ಅಂತಿಮಗೊಳಿಸುವಲ್ಲಿನ ಬಾಕಿಗಳ ಕಾರಣ ಸಾ.ವ.ಉ.ಗಳ ವಾಸ್ತವಿಕ ಕಾರ್ಯಸಾಧನೆಯನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ.

**1.28** ಸಾ.ವ.ಉ.ಗಳ ಹಣಕಾಸಿನ ಫಲಿತಾಂಶಗಳು, ಹಣಕಾಸಿನ ಸ್ಥಿತಿ ಹಾಗೂ ಕಾರ್ಯನಿರತ ಶಾಸನಬದ್ಧ ನಿಗಮಗಳ ಕಾರ್ಯಚಟುವಟಿಕೆಯ ಫಲಿತಾಂಶಗಳನ್ನು ಅನುಕ್ರಮವಾಗಿ **ಅನುಬಂಧ 4, 5 ಮತ್ತು 6ರಲ್ಲಿ** ವಿವರಿಸಲಾಗಿದೆ. ಸಾ.ವ.ಉ.ಗಳ ವಹಿವಾಟು ಮತ್ತು ರಾಜ್ಯದ ಒಟ್ಟಾರೆ ದೇಶೀಯ ಉತ್ಪನ್ನದ ಅನುಪಾತಗಳು ರಾಜ್ಯದ ಅರ್ಥವ್ಯವಸ್ಥೆಯಲ್ಲಿ ಸಾ.ವ.ಉ.ಗಳ ಕಾರ್ಯಚಟುವಟಿಕೆಗಳ ಗಮನಾರ್ಹ ವ್ಯಾಪ್ತಿಯನ್ನು ತೋರಿಸುತ್ತವೆ. 2009–10 ರಿಂದ 2013–14ರ ಅವಧಿಯಲ್ಲಿನ ಕಾರ್ಯನಿರತ ಸಾ.ವ.ಉ.ಗಳ ವಹಿವಾಟು ಮತ್ತು ರಾಜ್ಯದ ಒಟ್ಟಾರೆ ದೇಶೀಯ ಉತ್ಪನ್ನಗಳ ತುಲನಾತ್ಮಕ ವಿವರಣೆಯನ್ನು ಈ ಕೆಳಗಿನ ಕೋಷ್ಟಕವು ನೀಡುತ್ತದೆ.

**ಕೋಷ್ಟಕ 1.6: ಕಾರ್ಯನಿರತ ಸಾ.ವ.ಉ.ಗಳ ವಹಿವಾಟು ಮತ್ತು ರಾಜ್ಯದ ಒಟ್ಟಾರೆ ದೇಶೀಯ ಉತ್ಪನ್ನಗಳ ವಿವರಗಳು**

**(₹ ಕೋಟಿಗಳಲ್ಲಿ)**


| ವಿವರಗಳು | 2009–10 | 2010–11 | 2011–12 | 2012–13 | 2013–14 |
|---|---|---|---|---|---|
| ವಹಿವಾಟು[10] | 36,369.48 | 41,493.51 | 34,490.58 | 37,867.13 | 44,908.32 |
| ರಾಜ್ಯದ ಒಟ್ಟಾರೆ ದೇಶೀಯ ಉತ್ಪನ್ನ[11] | 3,35,747.00 | 3,80,871.00 | 4,34,270.00 | 5,22,650.00 | 6,01,633.00 |
| ರಾಜ್ಯದ ಒಟ್ಟಾರೆ ದೇಶೀಯ ಉತ್ಪನ್ನಕ್ಕೆ ಹೋಲಿಸಿದಲ್ಲಿ ಶೇಕಡಾವಾರು ವಹಿವಾಟು | 10.83 | 10.89 | 7.94 | 7.25 | 7.46 |

[10] ಇತ್ತೀಚಿಗೆ ಅಂತಿಮಗೊಳಿಸಲಾದ ಲೆಕ್ಕಪತ್ರಗಳ ಪ್ರಕಾರ ವಹಿವಾಟು.

[11] ರಾಜ್ಯದ ಜಿಡಿಪಿ ಅಂಕಿಅಂಶಗಳು ಮಧ್ಯಮ ಅವಧಿಯ ಹಣಕಾಸು ಯೋಜನೆ ಪ್ರಕಾರ ಇವೆ ಮತ್ತು 2011–12ನೇ ಸಾಲಿಗೆ ರಾಜ್ಯಸರ್ಕಾರದ ಅಂಕಿ ಅಂಶಗಳು ತ್ವರಿತ ಅಂದಾಜುಗಳಾಗಿರುತ್ತವೆ, 2012–13 ಮುಂಗಡ ಅಂದಾಜು ಹಾಗೂ 2013–14 ಯೋಜಿತ ಅಂದಾಜುಗಳಾಗಿರುತ್ತವೆ.

**1.29** 2008–09ರಿಂದ 2013–14ರವರೆಗೆ ರಾಜ್ಯದ ಕಾರ್ಯನಿರತ ಸಾ.ವ.ಉ.ಗಳು ಗಳಿಸಿದ ಲಾಭ ಅಥವಾ ಭರಿಸಿದ ನಷ್ಟವನ್ನು ಈ ಕೆಳಗಿನ ಲಂಬನಕ್ಷೆಯಲ್ಲಿ ಕೊಡಲಾಗಿದೆ:

**ನಕ್ಷೆ 1.4: 2008–09 ರಿಂದ 2013–14 ರ ಅವಧಿಯಲ್ಲಿ ಕಾರ್ಯನಿರತ ಸಾ.ವ.ಉ.ಗಳು ಗಳಿಸಿದ ಒಟ್ಟು ಲಾಭ, ಒಟ್ಟು ನಷ್ಟ ಮತ್ತು ನಿವ್ವಳ ಲಾಭ/ನಷ್ಟದ ವಿವರ.**




**(ಆವರಣದಲ್ಲಿರುವ ಅಂಕಿಗಳು ಆಯಾ ವರ್ಷಗಳಲ್ಲಿದ್ದ ಕಾರ್ಯನಿರತ ಸಾ.ವ.ಉ.ಗಳನ್ನು ಸೂಚಿಸುತ್ತವೆ) (₹ ಕೋಟಿಗಳಲ್ಲಿ)**

**1.30** ಅಂತಿಮಗೊಳಿಸಲಾದ ಇತ್ತೀಚಿನ ಲೆಕ್ಕಪತ್ರಗಳ ಪ್ರಕಾರ, ಕಾರ್ಯನಿರತ 81 ಸಾ.ವ.ಉ.ಗಳ ಪೈಕಿ, 47 ಸಾ.ವ.ಉ.ಗಳು ₹ 1,906.09 ಕೋಟಿ ಲಾಭ ಗಳಿಸಿದ್ದವು ಹಾಗೂ 24 ಸಾ.ವ.ಉ.ಗಳು ₹ 1,028.27 ಕೋಟಿ ನಷ್ಟ ಭರಿಸಿದ್ದವು. ಫೆಬ್ರವರಿ 2014ರಲ್ಲಿ ಸ್ಥಾಪನೆಯಾಗಿದ್ದ ಕರ್ನಾಟಕ ವಿಶ್ವಕರ್ಮ ಕಮ್ಯುನಿಟಿ ಡೆವಲಪ್‌ಮೆಂಟ್ ಕಾರ್ಪೋರೇಶನ್ ಲಿಮಿಟೆಡ್ ಮತ್ತು ಮಾರ್ಚ್ 2014ರಲ್ಲಿ ಸ್ಥಾಪನೆಯಾಗಿದ್ದ ಬೆಂಗಳೂರು ಸಬರ್ಬನ್ ರೇಲ್ ಕಂಪನಿ ಲಿಮಿಟೆಡ್ ತಮ್ಮ ಮೊದಲ ಲೆಕ್ಕಪತ್ರಗಳನ್ನು ಅಂತಿಮಗೊಳಿಸಿರಲಿಲ್ಲ. ಐದು[12] ಕಂಪನಿಗಳು ಲಾಭ ಮತ್ತು ನಷ್ಟದ ಲೆಕ್ಕಪತ್ರವನ್ನು ತಯಾರಿಸಿರಲಿಲ್ಲ ಮತ್ತು ಕೇವಲ ಕಾರ್ಯಾಚರಣೆಗಳ–ಪೂರ್ವ ವೆಚ್ಚವನ್ನು ಮಾತ್ರ ಹೊಂದಿದ್ದವು. ಒಂದು ಕಂಪನಿಯು (ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ) ಆದಾಯ ಮತ್ತು ವೆಚ್ಚದ ಲೆಕ್ಕಪತ್ರವನ್ನು ಸಿದ್ಧಪಡಿಸಿತ್ತು ಹಾಗೂ ಆದಾಯಕ್ಕಿಂತ ಮಿಗಿಲಾದ ವೆಚ್ಚವನ್ನು ಬಂಡವಾಳೀಕರಿಸಿತ್ತು. ಮತ್ತೊಂದು ಕಂಪನಿ (ಕರ್ನಾಟಕ ಔದ್ಯೋಗಿಕ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮ ನಿಯಮಿತ) ಆದಾಯ ಮತ್ತು ವೆಚ್ಚದ ತಖ್ತೆಯನ್ನು ಸಿದ್ಧಪಡಿಸಿತ್ತು. ಒಂದು ಕಂಪನಿಯು (ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ) ಭರಿಸಲಾಗಿದ್ದ ನಿವ್ವಳ ಆಡಳಿತಾತ್ಮಕ ವೆಚ್ಚಗಳಿಗೆ ಸಮನಾಗಿ ನಿರ್ವಹಣಾ ಶುಲ್ಕವನ್ನು ಕೋರುವ ಮೂಲಕ ಗಳಿಸಲಾದ ಲಾಭವು ಶೂನ್ಯ ಎಂಬುದಾಗಿ ದಾಖಲಿಸಿತ್ತು.

ಲಾಭಕ್ಕೆ ಪ್ರಮುಖವಾಗಿ ಕಾಣಿಕೆ ನೀಡಿದ ಕಂಪನಿಗಳೆಂದರೆ ಬೆಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ (₹ 432.77 ಕೋಟಿ) ಹಾಗೂ ಮೈಸೂರು ಮಿನರಲ್ಸ್ ಲಿಮಿಟೆಡ್ (₹ 313.35 ಕೋಟಿ). ಅತಿ ಹೆಚ್ಚಿನ ನಷ್ಟ ಅನುಭವಿಸಿದ ಕಂಪನಿಗಳೆಂದರೆ ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತ (₹ 268.35 ಕೋಟಿ), ಗುಲ್ಬರ್ಗ ವಿದ್ಯುಚ್ಛಕ್ತಿ ಸರಬರಾಜು ಕಂಪನಿ

[12] ಕಾವೇರಿ ನೀರಾವರಿ ನಿಗಮ ನಿಯಮಿತ, ರಾಯಚೂರು ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತ, ತದಡಿ ಪೋರ್ಟ್ ಲಿಮಿಟೆಡ್ ಮತ್ತು ಕರ್ನಾಟಕ ಸ್ಟೇಟ್ ಕೋಲ್ ಮೈನಿಂಗ್ ಕಂಪನಿ ಲಿಮಿಟೆಡ್.

ನಿಯಮಿತ (₹ 194.56 ಕೋಟಿ) ಮತ್ತು ಕರ್ನಾಟಕ ನೀರಾವರಿ ನಿಗಮ ನಿಯಮಿತ (₹ 172.54 ಕೋಟಿ).

***ನಷ್ಟಗಳಿಗೆ ಕಾರಣಗಳು***

**1.31** ಸಾ.ವ.ಉ.ಗಳು ನಷ್ಟ ಅನುಭವಿಸಲು ಹಣಕಾಸು ನಿರ್ವಹಣೆ, ಯೋಜನೆಯನ್ನು ತಯಾರಿಸುವುದು, ಯೋಜನೆಯನ್ನು ಕಾರ್ಯಗತಗೊಳಿಸುವುದು, ಅವುಗಳ ಕಾರ್ಯಾಚರಣೆ ಹಾಗೂ ಮೇಲ್ವಿಚಾರಣೆಗಳಲ್ಲಿ ಇದ್ದ ನ್ಯೂನತೆಗಳು ಪ್ರಮುಖ ಕಾರಣಗಳಾಗಿದ್ದವು. ಈ ವರದಿಯ ಮುಂದಿನ ಅಧ್ಯಾಯಗಳಲ್ಲಿ ಚರ್ಚಿಸಿರುವ ಪ್ರಕರಣಗಳಲ್ಲಿ ಕಂಡುಬರುವಂತೆ ತಪ್ಪಿಸಬಹುದಾಗಿದ್ದ ನಷ್ಟಗಳು ₹ 957.39 ಕೋಟಿ ಇದ್ದವು ಹಾಗೂ ₹ 86.65 ಕೋಟಿ ವ್ಯರ್ಥ ಹೂಡಿಕೆ ಮಾಡಲಾಗಿತ್ತು. ಉತ್ತಮ ನಿರ್ವಹಣೆಯ ಮೂಲಕ ಈ ನಷ್ಟಗಳನ್ನು ಕಡಿಮೆಗೊಳಿಸಬಹುದಾಗಿತ್ತು ಅಥವಾ ಲಾಭವನ್ನು ಗಣನೀಯವಾಗಿ ಹೆಚ್ಚಿಸಬಹುದಾಗಿತ್ತು. ಕಳೆದ ಮೂರು ವರ್ಷಗಳಲ್ಲಿನ ಲೆಕ್ಕಪರಿಶೋಧನಾ ವರದಿಗಳಲ್ಲಿನ ವರ್ಷವಾರು ವಿವರಗಳನ್ನು ಈ ಕೆಳಗೆ ನೀಡಲಾಗಿದೆ:

**ಕೋಷ್ಟಕ 1.7: ಲೆಕ್ಕಪರಿಶೋಧನಾ ವರದಿಗಳಲ್ಲಿ ಟೀಕಿಸಲಾಗಿದ್ದ ನಿಯಂತ್ರಿಸಬಹುದಾಗಿದ್ದ ನಷ್ಟಗಳು ಮತ್ತು ವ್ಯರ್ಥ ಹೂಡಿಕೆ**

(₹ ಕೋಟಿಗಳಲ್ಲಿ)

| ವಿವರಗಳು | 2011–12 | 2012–13 | 2013–14 | ಒಟ್ಟು |
|---|---|---|---|---|
| ನಿವ್ವಳ ಲಾಭ (ನಷ್ಟ) (–) | 407.87 | 413.72 | 693.52 | 1515.11 |
| ಸಿ.ಎ.ಜಿ. ಲೆಕ್ಕಪರಿಶೋಧನಾ ವರದಿ ಪ್ರಕಾರ ನಿಯಂತ್ರಿಸಬಹುದಾಗಿದ್ದ ನಷ್ಟಗಳು | 1,890.63 | 1,075.66 | 957.39 | 3,923.68 |
| ವ್ಯರ್ಥ ಹೂಡಿಕೆ | 112.95 | 524.48 | 86.65 | 724.08 |

**1.32** ಸಿ.ಎ.ಜಿ. ಲೆಕ್ಕಪರಿಶೋಧನಾ ವರದಿಗಳಲ್ಲಿ ತಿಳಿಸಿರುವ ಮೇಲ್ಕಂಡ ನಷ್ಟಗಳು ಸಾ.ವ.ಉ.ಗಳ ದಾಖಲೆಗಳ ಪರೀಕ್ಷಾ–ಪರಿಶೀಲನೆ ಮೇಲೆ ಆಧಾರಿತವಾಗಿವೆ. ನೈಜ ನಿಯಂತ್ರಿಸಬಹುದಾಗಿದ್ದ ನಷ್ಟಗಳು ಇನ್ನೂ ಅಧಿಕ ಪ್ರಮಾಣದಲ್ಲಿರಬಹುದಾದ ಸಾಧ್ಯತೆಗಳಿವೆ. ಮೇಲಿನ ಸ್ಥಿತಿಯು, ಸಾ.ವ.ಉಗಳ ಕಾರ್ಯನಿರ್ವಹಣೆಯಲ್ಲಿ ಹೆಚ್ಚಿನ ವೃತ್ತಿಪರತೆ ಮತ್ತು ಜವಾಬ್ದಾರಿಯ ಅವಶ್ಯಕತೆಯತ್ತ ಬೊಟ್ಟು ಮಾಡುತ್ತದೆ.

***ತೊಡಗಿಸಿದ ಬಂಡವಾಳ, ಸಾಲ ವಹಿವಾಟು ಹಾಗೂ ಲಾಭಾಂಶ***

**1.33** ಸಾ.ವ.ಉ.ಗಳಿಗೆ ಸಂಬಂಧಪಟ್ಟ ಕೆಲವು ಮುಖ್ಯ ಪರಿಮಿತಿಗಳನ್ನು ಈ ಕೆಳಗೆ ಕೊಡಲಾಗಿದೆ:

**ಕೋಷ್ಟಕ 1.8: ಸಾ.ವ.ಉ.ಗಳಿಗೆ ಸಂಬಂಧಿಸಿದ ಮುಖ್ಯ ಪರಿಮಿತಿಗಳು**

(₹ ಕೋಟಿಗಳಲ್ಲಿ)

| ವಿವರಗಳು | 2008–09 | 2009–10 | 2010–11 | 2011–12 | 2012–13 | 2013–14 |
|---|---|---|---|---|---|---|
| ತೊಡಗಿಸಿದ ಬಂಡವಾಳದ ಮೇಲಿನ ಪ್ರತಿಫಲ (ಶೇಕಡಾವಾರು) | 1.88 | 3.47 | 4.40 | 4.22 | 4.77 | 5.46 |
| ಸಾಲ | 24,087.55 | 24,704.05 | 25,364.38 | 29,197.31 | 27,434.29 | 28,434.00 |
| ವಹಿವಾಟು[13] | 32,627.68 | 36,369.48 | 41,493.51 | 34,490.58 | 37,867.13 | 44,908.32 |
| ಸಾಲ–ವಹಿವಾಟುಗಳ ಅನುಪಾತ | 0.74:1 | 0.68:1 | 0.61:1 | 0.85:1 | 0.72:1 | 0.63:1 |
| ಬಡ್ಡಿ ಪಾವತಿಗಳು | 1,556.95 | 1,901.19 | 2,269.00 | 2,555.79 | 2,557.69 | 3,038.67 |
| ಸಂಚಿತ ಲಾಭಗಳು/ ನಷ್ಟಗಳು(–) | (–)39.93 | (–)197.93 | 1,007.36 | 1,368.93 | 1,388.01 | 1,894.94 |

**(ವಹಿವಾಟನ್ನು ಹೊರತುಪಡಿಸಿ ಮೇಲಿನ ಅಂಕಿಗಳು ಎಲ್ಲಾ ಸಾ.ವ.ಉ.ಗಳಿಗೆ ಸಂಬಂಧಿಸಿವೆ; ವಹಿವಾಟು ಕಾರ್ಯನಿರತ ಸಾ.ವ.ಉ.ಗಳಿಗೆ ಸಂಬಂಧಿಸಿದ್ದಾಗಿದೆ).**

[13] 30 ಸೆಪ್ಟಂಬರ್ 2014ರಲ್ಲಿದ್ದಂತೆ ಇತ್ತೀಚಿನ ಅಂತಿಮಗೊಳಿಸಲಾದ ಲೆಕ್ಕಪತ್ರಗಳ ಪ್ರಕಾರ ಕಾರ್ಯನಿರತ ಸಾ.ವ.ಉ.ಗಳ ವಹಿವಾಟು.

**1.34** ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ ಪ್ರಸಕ್ತ ವರ್ಷದ ವಹಿವಾಟಿನಲ್ಲಿ ಹೆಚ್ಚಳವಾಗಿದ್ದಿತು. ಇದು, ವಿದ್ಯುತ್ ವಲಯದ ಕಂಪನಿಗಳು, ಸಾರಿಗೆ ನಿಗಮಗಳು, ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ, ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ನಿಯಮಿತ, ಮೈಸೂರು ಮಿನರಲ್ಸ್ ಲಿಮಿಟೆಡ್ ಮತ್ತು ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ ಇವುಗಳ ಸುಧಾರಿತ ವಹಿವಾಟಿನ ಕೊಡುಗೆಯಿಂದ ಆಗಿತ್ತು.

**1.35** ರಾಜ್ಯ ಸರ್ಕಾರವು ಮೇ 2003ರಲ್ಲಿ ಹೊರಡಿಸಿದ ಮಾರ್ಗಸೂಚಿಗಳ ಪ್ರಕಾರ ರಾಜ್ಯ ಸರ್ಕಾರವು ಈಕ್ವಿಟಿ ಷೇರುಗಳನ್ನು ಹೊಂದಿರುವ ಸಾರ್ವಜನಿಕ ಉದ್ದಿಮೆಗಳಲ್ಲಿ ಅಥವಾ ಜಂಟಿ ಸಾಹಸೋದ್ಯಮ ಮಂಡಳಿಗಳಲ್ಲಿ, ಸರ್ಕಾರದಿಂದ ನಿರ್ದೇಶಕರ ಮಂಡಳಿಗಳಿಗೆ ನಾಮಾಂಕಿತರಾದವರು ಷೇರುಗಳ ಮೇಲೆ ಕನಿಷ್ಠ ಶೇಕಡಾ 20ರ ಲಾಭಾಂಶ ಘೋಷಣೆಗೆ ಒತ್ತಾಯಿಸತಕ್ಕದ್ದು. ಇತ್ತೀಚೆಗೆ ಅಂತಿಮಗೊಳಿಸಲ್ಪಟ್ಟ ಲೆಕ್ಕಪತ್ರಗಳ ಪ್ರಕಾರ, 50 ಸಾ.ವ.ಉ.ಗಳು[14] ಒಟ್ಟಾರೆ ₹ 1,906.57 ಕೋಟಿ ಲಾಭವನ್ನು ಗಳಿಸಿದ್ದವು. ಆದರೆ, 19 ಸಾ.ವ.ಉ.ಗಳು ಮಾತ್ರ ₹ 65.84 ಕೋಟಿ ಮೊತ್ತದಷ್ಟು ಲಾಭಾಂಶವನ್ನು ಘೋಷಿಸಿದ್ದವು.

## ಕಾರ್ಯಸ್ಥಗಿತ ಸಾ.ವ.ಉ.ಗಳು

**1.36** 31 ಮಾರ್ಚ್ 2014ರಲ್ಲಿ ಕಾರ್ಯಸ್ಥಗಿತಗೊಂಡಿದ್ದ 14 ಸಾ.ವ.ಉ.ಗಳು (ಎಲ್ಲವೂ ಕಂಪನಿಗಳು) ಇದ್ದವು. ಇವುಗಳ ಪೈಕಿ, ಏಳು ಸಾ.ವ.ಉ.ಗಳು ಸಮಾಪನ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದವು. ಕಳೆದ ಐದು ವರ್ಷಗಳಲ್ಲಿ ಪ್ರತಿ ವರ್ಷದ ಅಂತ್ಯದಲ್ಲಿ ಇದ್ದಂತಹ ಕಾರ್ಯಸ್ಥಗಿತ ಕಂಪನಿಗಳ ಸಂಖ್ಯೆಗಳನ್ನು ಈ ಕೆಳಗೆ ನೀಡಲಾಗಿದೆ:

**ಕೋಷ್ಟಕ 1.9: ಕಾರ್ಯಸ್ಥಗಿತ ಕಂಪನಿಗಳ ಸಂಖ್ಯೆ**

| ವಿವರಗಳು | 2009–10 | 2010–11 | 2011–12 | 2012–13 | 2013–14 |
|---|---|---|---|---|---|
| ಕಾರ್ಯಸ್ಥಗಿತ ಕಂಪನಿಗಳ ಸಂಖ್ಯೆ | 15 | 14 | 14 | 14 | 14 |

2013–14ರಲ್ಲಿ, ಏಳು ಕಾರ್ಯಸ್ಥಗಿತ[15] ಸಾ.ವ.ಉ.ಗಳು ಆಡಳಿತಾತ್ಮಕ ವೆಚ್ಚವೆಂದು ₹ 1.35 ಕೋಟಿ ಮೊತ್ತದಷ್ಟು ವೆಚ್ಚವನ್ನು ಭರಿಸಿದ್ದವು. ಈ ಸಾ.ವ.ಉ.ಗಳು ಸದರಿ ವೆಚ್ಚವನ್ನು ಬಾಡಿಗೆ, ಬಡ್ಡಿ ಮತ್ತು ಇತರ ಮೂಲಗಳಿಂದ ಭರಿಸಿದ್ದವು.

**1.37** ಕಾರ್ಯಸ್ಥಗಿತ ಸಾ.ವ.ಉ.ಗಳ ಮುಚ್ಚುವಿಕೆಯ ಹಂತಗಳನ್ನು ಈ ಕೆಳಗೆ ನೀಡಲಾಗಿದೆ:

**ಕೋಷ್ಟಕ 1.10: ಕಾರ್ಯಸ್ಥಗಿತ ಸಾ.ವ.ಉ.ಗಳ ಮುಚ್ಚುವಿಕೆಯ ಹಂತಗಳು**

| ಕ್ರಮ ಸಂಖ್ಯೆ | ವಿವರಗಳು | ಕಂಪನಿಗಳ ಸಂಖ್ಯೆ |
|---|---|---|
| 1 | ಕಾರ್ಯಸ್ಥಗಿತ ಸಾ.ವ.ಉ.ಗಳ ಒಟ್ಟು ಸಂಖ್ಯೆ | 14 |
| 2 | ಮೇಲಿನ ಕ್ರಮ ಸಂಖ್ಯೆ (1)ರ ಪೈಕಿ : | |
| (ಎ) | ನ್ಯಾಯಾಲಯದಿಂದ ಸಮಾಪನೆಗೊಳ್ಳುತ್ತಿರುವುದು (ಸಮಾಪಕರನ್ನು ನೇಮಕಗೊಳಿಸಿರುವುದು) | 7 |
| (ಬಿ) | ಸ್ವಇಚ್ಛೆಯಿಂದ ಸಮಾಪನಗೊಳಿಸುತ್ತಿರುವುದು (ಸಮಾಪಕರನ್ನು ನೇಮಕಗೊಳಿಸಿರುವುದು) | – |
| (ಸಿ) | ಮುಚ್ಚುವಿಕೆ ಅಂದರೆ ಸಮಾಪನ ಆದೇಶ/ ನಿರ್ದೇಶನಗಳನ್ನು ನೀಡಿರುವುದು, ಆದರೆ ಸಮಾಪನ ಪ್ರಕ್ರಿಯೆಯು ಇನ್ನೂ ಪ್ರಾರಂಭಗೊಂಡಿಲ್ಲದಿರುವುದು | 7 |

[14] ಕಾರ್ಯಸ್ಥಗಿತ ಸರ್ಕಾರಿ ಕಂಪನಿಗಳನ್ನು ಒಳಗೊಂಡಂತೆ.

[15] ಕರ್ನಾಟಕ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಲಿಮಿಟೆಡ್ (ರೂ0.15 ಕೋಟಿ), ಮೈಸೂರ್ ಟೊಬ್ಯಾಕೋ ಕಂಪನಿ ನಿಯಮಿತ (ರೂ 0.29 ಕೋಟಿ), ಕರ್ನಾಟಕ ಪಲ್ಪ್‌ವುಡ್ ನಿಯಮಿತ (ರೂ0.01 ಕೋಟಿ), ಮೈಸೂರು ಮ್ಯಾಚ್ ಕಂಪನಿ ಲಿಮಿಟೆಡ್ (ರೂ 0.01 ಕೋಟಿ), ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್ (ರೂ0.87 ಕೋಟಿ), ವಿಜಯನಗರ ಉಕ್ಕು ನಿಯಮಿತ (ರೂ 0.04 ಕೋಟಿ) ಮತ್ತು ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ನಿಯಮಿತ (ರೂ0.03 ಕೋಟಿ).

**1.38** ನ್ಯಾಯಾಲಯದ ಆದೇಶದ ಮೂಲಕ ಸಮಾಪನ ಮಾರ್ಗವನ್ನು ಅನುಸರಿಸಿರುವ ಕಂಪನಿಗಳು ಕಳೆದ ಐದರಿಂದ ಹತ್ತು ವರ್ಷಗಳವರೆಗಿನ ಅವಧಿಯಲ್ಲಿ ಸಮಾಪನ ಹಂತದಲ್ಲಿದ್ದವು. ಕಂಪನಿಗಳ ಅಧಿನಿಯಮದ ಅಡಿಯಲ್ಲಿ ಸ್ವಯಂ–ಮುಚ್ಚಲ್ಪಡುವಿಕೆಯು ಶೀಘ್ರವಾಗಿ ಆಗುವುದು ಮತ್ತು ಅದನ್ನು ಅಳವಡಿಸಿಕೊಳ್ಳಬೇಕು/ಹುರುಪಿನಿಂದ ಅನುಸರಿಸಬೇಕು. ಕಾರ್ಯಸ್ಥಗಿತಗೊಂಡ ಅವಧಿಯಿಂದ, ಅವುಗಳನ್ನು ಮುಂದುವರಿಸಬೇಕೋ, ಬೇಡವೋ ಎಂಬುದನ್ನು ನಿರ್ಧರಿಸಲಾಗದಿರುವ ಏಳು ಸಾ.ವ.ಉ.ಗಳನ್ನು ಮುಚ್ಚುವ ಬಗ್ಗೆ ಸರ್ಕಾರವು ನಿರ್ಧರಿಸಬಹುದು.

## ಲೆಕ್ಕಪತ್ರಗಳ ಮೇಲಿನ ಟೀಕೆಗಳು ಮತ್ತು ಆಂತರಿಕ ಲೆಕ್ಕಪರಿಶೋಧನೆ

**1.39** ಅರವತ್ತೊಂದು ಕಾರ್ಯನಿರತ ಕಂಪನಿಗಳು ತಮ್ಮ 67 ಲೆಕ್ಕಪರಿಶೋಧನೆಗೊಳಪಟ್ಟ ಲೆಕ್ಕಪತ್ರಗಳನ್ನು ಪ್ರಧಾನ ಮಹಾಲೇಖಪಾಲರಿಗೆ 1 ಅಕ್ಟೋಬರ್ 2013 ಹಾಗೂ 30 ಸೆಪ್ಟೆಂಬರ್ 2014ರ ನಡುವೆ ಕಳುಹಿಸಿದ್ದವು. ಇವುಗಳ ಪೈಕಿ, 40 ಕಂಪನಿಗಳ 43 ಲೆಕ್ಕಪತ್ರಗಳು ಪೂರಕ ಲೆಕ್ಕಪರಿಶೋಧನೆಗೆ ಆಯ್ಕೆ ಮಾಡಲ್ಪಟ್ಟಿದ್ದವು. ಉಳಿದ 24 ಲೆಕ್ಕಪತ್ರಗಳಿಗೆ ವಿಶ್ಲೇಷಣೆಗೊಳಪಡದ ಪ್ರಮಾಣ ಪತ್ರ ನೀಡಲಾಯಿತು. ಸಿ.ಎ.ಜಿ.ಯವರಿಂದ ನೇಮಕ ಮಾಡಲ್ಪಟ್ಟ ಶಾಸನಬದ್ಧ ಲೆಕ್ಕಪರಿಶೋಧಕರ ಲೆಕ್ಕಪರಿಶೋಧನೆ ವರದಿಗಳು ಮತ್ತು ಸಿ.ಎ.ಜಿ.ಯ ಪೂರಕ ಲೆಕ್ಕಪರಿಶೋಧನಾ ವರದಿಗಳು ಸೂಚಿಸುವಂತೆ ಲೆಕ್ಕಪತ್ರಗಳ ನಿರ್ವಹಣೆಯ ಗುಣಮಟ್ಟದಲ್ಲಿ ಗಮನಾರ್ಹವಾದ ಸುಧಾರಣೆಗಳು ಆಗಬೇಕಿವೆ. ಶಾಸನಬದ್ಧ ಲೆಕ್ಕಪರಿಶೋಧಕರ ಮತ್ತು ಸಿಎ.ಜಿ.ಯವರ ಟೀಕೆಗಳು ಒಳಗೊಂಡಿದ್ದ ಒಟ್ಟಾರೆ ಹಣದ ಮೌಲ್ಯದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ:

**ಕೋಷ್ಟಕ 1.11: ಟೀಕೆಗಳ ಒಟ್ಟಾರೆ ಹಣದ ಮೌಲ್ಯದ ವಿವರಗಳು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಟೀಕೆಗಳ ಪರಿಣಾಮ | 2011–12 | | 2012–13 | | 2013–14 | |
|---|---|---|---|---|---|---|---|
| | | ಲೆಕ್ಕಪತ್ರಗಳ ಸಂಖ್ಯೆ | ಮೊತ್ತ | ಲೆಕ್ಕಪತ್ರಗಳ ಸಂಖ್ಯೆ | ಮೊತ್ತ | ಲೆಕ್ಕಪತ್ರಗಳ ಸಂಖ್ಯೆ | ಮೊತ್ತ |
| 1 | ಲಾಭದಲ್ಲಿ ಇಳಿಕೆ | 15 | 1,045.66 | 5 | 78.31 | 15 | 524.19 |
| 2 | ಲಾಭದಲ್ಲಿ ಏರಿಕೆ | 2 | 2.86 | 5 | 3.33 | 6 | 11.72 |
| 3 | ನಷ್ಟದಲ್ಲಿ ಇಳಿಕೆ | 1 | 1.56 | 10 | 1.97 | 3 | 37.19 |
| 4 | ನಷ್ಟದಲ್ಲಿ ಏರಿಕೆ | 4 | 45.57 | 9 | 228.28 | 10 | 499.83 |

**1.40** 2013–14ರ ಸಾಲಿನಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರು 24 ಲೆಕ್ಕಪತ್ರಗಳಿಗೆ ಷರತ್ತುರಹಿತ ಪ್ರಮಾಣಪತ್ರಗಳನ್ನು, 41 ಲೆಕ್ಕಪತ್ರಗಳಿಗೆ ಷರತ್ತುಬದ್ಧ ಪ್ರಮಾಣಪತ್ರಗಳನ್ನು, ಒಂದು ಲೆಕ್ಕಪತ್ರಕ್ಕೆ ಪ್ರತಿಕೂಲ ವರದಿಯನ್ನು (ಅಂದರೆ ಲೆಕ್ಕಪತ್ರಗಳು ನೈಜ ಹಾಗೂ ನ್ಯಾಯಸಮ್ಮತ ಸ್ಥಿತಿಯನ್ನು ಪ್ರತಿಬಿಂಬಿಸುವುದಿಲ್ಲವೆಂಬ ಅರ್ಥವನ್ನು ಕೊಡುವ) ಹಾಗೂ ಒಂದು ಲೆಕ್ಕಪತ್ರಕ್ಕೆ ಅಭಿಪ್ರಾಯ ಹಕ್ಕು ನಿರಾಕರಣೆ ಪತ್ರವನ್ನು ನೀಡಿದ್ದರು. ಕಂಪನಿಗಳ ಲೇಖಾ ಮಾನದಂಡಗಳ ಅನುಸರಣೆಯು ನಿಕೃಷ್ಟವಾಗಿತ್ತು. ಪ್ರಸಕ್ತ ಸಾಲಿನಲ್ಲಿ 34 ಕಂಪನಿಗಳಲ್ಲಿ ಲೇಖಾ ಮಾನದಂಡಗಳ ಅನುಸರಣೆಯಾಗದ 117 ಪ್ರಕರಣಗಳು ಇದ್ದವು.

**1.41** ಕಂಪನಿಗಳ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ಶಾಸನಬದ್ಧ ಲೆಕ್ಕಪರಿಶೋಧಕರು ಮಾಡಿದ್ದ ಕೆಲವು ಪ್ರಮುಖ ಟೀಕೆಗಳನ್ನು ಈ ಕೆಳಗೆ ತಿಳಿಸಲಾಗಿದೆ:

**ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ (2011–12)**

- ಲೆಕ್ಕಪತ್ರಗಳು ಕಂಪನಿಗಳ ಅಧಿನಿಯಮ 1956ರ ಅನ್ವಯ ಮಾಹಿತಿಯನ್ನು ಅಗತ್ಯವಿರುವ ರೀತಿಯಲ್ಲಿ ನೀಡಿರಲಿಲ್ಲ ಮತ್ತು ಭಾರತದಲ್ಲಿ ಸಾಮಾನ್ಯವಾಗಿ ಅನುಸರಿಸುವ ಲೆಕ್ಕಪತ್ರಗಳ ಸಿದ್ಧಾಂತಗಳಿಗೆ ಅನುಗುಣವಾಗಿ ಇರಲಿಲ್ಲ ಹಾಗೂ ನೈಜ ಮತ್ತು ನ್ಯಾಯಸಮ್ಮತ ಚಿತ್ರ ನೀಡುತ್ತಿರಲಿಲ್ಲ.

**ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ (2012–13)**

- ಭೂಮಿಯ ಹಕ್ಕುಪತ್ರವನ್ನು ಹೊಂದಿಲ್ಲದಿರುವಿಕೆ, ಮುಂಗಡಗಳು/ ಠೇವಣಿಗಳು/ ಸಾಲಿಗರು/ ಬ್ಯಾಂಕ್ ಖಾತೆಗಳನ್ನು ಸಮನ್ವಯಗೊಳಿಸದಿರುವಿಕೆ. 2006–07ರ ವರಗೆ ಆದಾಯ ತೆರಿಗೆ ರಿಟರ್ನ್ ಸಲ್ಲಿಸದಿರುವಿಕೆ, ಇವುಗಳ ಮೇಲಿನ ಪ್ರತಿಕೂಲ ಟೀಕೆಯನ್ನು ಪರಿಗಣಿಸಿ ಲೆಕ್ಕಪತ್ರಗಳು, ಅನುಸೂಚಿಗಳು ಮತ್ತು ಟಿಪ್ಪಣಿಗಳೊಂದಿಗೆ ಕಂಪನಿಗಳ ಅಧಿನಿಯಮ, 1956ರ ಅನ್ವಯ ಅಗತ್ಯವಿರುವ ರೀತಿಯಲ್ಲಿ ಮಾಹಿತಿಯನ್ನು ಕೊಡುತ್ತಿವೆಯೇ ಹಾಗೂ ಆಸ್ತಿ ಮತ್ತು ಜವಾಬ್ದಾರಿ ತಖ್ತೆಗೆ ಸಂಬಂಧಿಸಿದಂತೆ 31 ಮಾರ್ಚ್ 2013ರಲ್ಲಿದ್ದಂತೆ ಕಾರ್ಯಚಟುವಟಿಕಗಳ ನೈಜ ಮತ್ತು ನ್ಯಾಯ ಸಮ್ಮತ ಚಿತ್ರಣ ನೀಡುತ್ತಿವೆಯೇ ಹಾಗೂ ಕಂಪನಿಯ ಲಾಭ ಮತ್ತು ನಷ್ಟದ ತಖ್ತೆಗೆ ಸಂಬಂಧಿಸಿದಂತೆ ಆ ದಿನಕ್ಕೆ ಕೊನೆಯಾದ ವರ್ಷಕ್ಕೆ ಸೂಕ್ತ ಚಿತ್ರಣ ನೀಡುತ್ತಿದೆಯೇ ಎಂಬುದರ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಲಾಗುತ್ತಿಲ್ಲ.

**ಹುಬ್ಬಳ್ಳಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ (2012–13)**

- ಕಂಪನಿಯಿಂದ ಉತ್ಪಾದನೆಗೊಂಡ ಆಸ್ತಿಗಳು ಪ್ರಮಾಣ ದರದಲ್ಲಿ ಬೆಲೆಕಟ್ಟಲ್ಪಟ್ಟು ಬಂಡವಾಳೀಕರಿಸಿದ ಪ್ರಗತಿಯಲ್ಲಿರುವ ಕಾಮಗಾರಿಗಳ ಮೂಲಕ ಲೆಕ್ಕಕ್ಕೆ ತೆಗೆದುಕೊಳ್ಳಲ್ಪಡುತ್ತವೆ. ಇದು ಲೇಖಾ ಮಾನದಂಡ 10ರ ಅನುಸಾರ ಇರುವುದಿಲ್ಲ.

**ಗುಲ್ಬರ್ಗ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ (2012–13)**

- ಮುಂಗಡ ಹಣ, ಗ್ರಾಹಕರ ನಗದು ಠೇವಣಿ ಹೊರತುಪಡಿಸಿ ಕಂಪನಿಯು ತನ್ನ ಲೆಕ್ಕಪತ್ರಗಳಲ್ಲಿ ತೋರಿಸಿರುವ ನಗದು ಶಿಲ್ಕು, ಚೆಕ್ಕುಗಳು/ಡಿಮ್ಯಾಂಡ್ ಡ್ರಾಫ್ಟ್‌ಗಳು, ನಗದು ಅಮಾನತ್ತು – ಮುಂಗಡ/ನೌಕರರಿಗೆ ಪಾವತಿಯಾದ ಕಳೆದ ಹಲವಾರು ವರ್ಷಗಳಿಂದ ಸಕ್ರಮವಾಗದಿರುವ ಸಂಬಳ ಮತ್ತು ಇತರ ಭತ್ಯೆ ಹಾಗೂ ತನಿಖೆ ಬಾಕಿಯಿರುವ ವಂಚನೆಗಳನ್ನು ಒಳಗೊಂಡಿದ್ದು ಇದು ಲೇಖಾ ಮಾನದಂಡ 3ರ ಅನುಸಾರ ಇರುವುದಿಲ್ಲ.

**ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತ (2012–13)**

- ಗ್ರಾಹಕರ ಭದ್ರತಾ ಠೇವಣಿ ಖಾತೆಯಲ್ಲಿನ ₹ 32.91 ಕೋಟಿ ವ್ಯತ್ಯಾಸವು ಬಡ್ಡಿಯನ್ನು ₹ 1.97 ಕೋಟಿಯಷ್ಟು ಹೆಚ್ಚಿಗೆ ತೋರಿಸುವಲ್ಲಿ ಹಾಗೂ ಕಂಪನಿಯ ಬಾದ್ಯತೆಗಳು ಮತ್ತು ನಷ್ಟವನ್ನು ₹ 32.91 ಕೋಟಿಯಷ್ಟು ಹೆಚ್ಚಿಗೆ ತೋರಿಸುವಲ್ಲಿ ಪರಿಣಮಿಸಿತು.

**ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ (2013–14)**

- ಸಾಲಗಾರರು ಒಂದು ಬಾರಿಯ ಇತ್ಯರ್ಥದ (ಒ.ಟಿ.ಎಸ್.) ಯೋಜನೆಯ ಅರ್ಹತೆಯ ಬಗ್ಗೆ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿರುವುದಾಗಿ ಸಾಧಿಸಿದ ಕಾರಣ, ಸಾಲದ ಖಾತೆಗೆ ಪ್ರತಿಯಾಗಿ ವಸೂಲಾದ ಅಸಲು ಮತ್ತು ಬಡ್ಡಿಯನ್ನು ಪ್ರಸಕ್ತ ವರ್ಷದಲ್ಲಿ ಆದಾಯವೆಂದು ಗುರುತಿಸಿಲ್ಲ. ತತ್ಪರಿಣಾಮವಾಗಿ, ಕಂಪನಿಯ ಲಾಭವನ್ನು ₹ 3.97 ಕೋಟಿಯಷ್ಟು ಕಡಿಮೆ ತೋರಿಸಲಾಗಿತ್ತು ಹಾಗೂ ಬಾದ್ಯತೆಯನ್ನು ಅಷ್ಟರ ಮಟ್ಟಿಗೆ ಹೆಚ್ಚಿಗೆ ತೋರಿಸಲಾಗಿತ್ತು.

**ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ (2013–14)**

- ಗ್ರಾಚ್ಯುಟಿ ಮತ್ತು ರಜೆ ನಗದೀಕರಣದ ಅನುವು ಮತ್ತು ಖರ್ಚುಗಳು ವಿಮಾ ಮೌಲ್ಯಮಾಪನ ವರದಿಗೆ ಅನುರೂಪವಾಗದಿದ್ದುದರಿಂದ, ವೆಚ್ಚ ಮತ್ತು ನಷ್ಟವನ್ನು ಕ್ರಮವಾಗಿ ₹ 3.48 ಕೋಟಿ ಮತ್ತು ₹ 1.08 ಕೋಟಿಯಷ್ಟು ಕಡಿಮೆ ತೋರಿಸಲಾಯಿತು.

**ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ (2012–13)**

- ಕಂಪನಿಯು 2009–10ರ ಆರ್ಥಿಕ ವರ್ಷಕ್ಕೆ ಮಂಡಳಿಯಿಂದ ಅನುಮೋದನೆಗೊಂಡ ಎಕ್ಸ್‌ಗ್ರೇಷಿಯಾ ₹ 1.50 ಕೋಟಿಗೆ ಅನುವು ಮಾಡಿರಲಿಲ್ಲ. ಇದರಿಂದಾಗಿ ಈ ಮೊತ್ತದಷ್ಟು ಲಾಭ ಹೆಚ್ಚಿಗೆ ತೋರಿಸಲ್ಪಟ್ಟಿತು ಹಾಗೂ ಅನುವುಗಳು ಕಡಿಮೆ ತೋರಿಸಲ್ಪಟ್ಟಿತು.

**1.42** ಶಾಸನಬದ್ಧ ಲೆಕ್ಕಪರಿಶೋಧಕರು (ಸನ್ನದು ಲೆಕ್ಕಿಗರು) ಕಂಪನಿಗಳ ಅಧಿನಿಯಮ, 1956ರ ಪರಿಚ್ಛೇದ 619(3)(ಎ) ಅನ್ವಯ ಸಿ.ಎ.ಜಿ.ಯವರು ನೀಡುವ ನಿರ್ದೇಶನಗಳ ಅನುಸಾರವಾಗಿ ಲೆಕ್ಕಪರಿಶೋಧನೆಗೊಳಪಟ್ಟ ಕಂಪನಿಗಳ ಆಂತರಿಕ ನಿಯಂತ್ರಣ/ಆಂತರಿಕ ಲೆಕ್ಕಪರಿಶೋಧನಾ ವ್ಯವಸ್ಥೆಯೂ ಸೇರಿದಂತೆ ಹಲವು ವಿಷಯಗಳ ಮೇಲೆ ವಿವರಣಾತ್ಮಕ ವರದಿಯನ್ನು ನೀಡಬೇಕು ಮತ್ತು ಯಾವ ಕ್ಷೇತ್ರಗಳಲ್ಲಿ ಸುಧಾರಣೆಯ ಅವಶ್ಯಕತೆ ಇದೆ ಎಂಬುದನ್ನು ಗುರುತಿಸಬೇಕು. 13 ಕಂಪನಿಗಳಿಗೆ ಸಂಬಂಧ ಪಟ್ಟಂತೆ ಆಂತರಿಕ ಲೆಕ್ಕಪರಿಶೋಧನೆ/ಆಂತರಿಕ ನಿಯಂತ್ರಣಾ ವ್ಯವಸ್ಥೆಗಳಲ್ಲಿನ ಸಾಧ್ಯವಾಗಬಹುದಾದ ಸುಧಾರಣೆಯ ಬಗ್ಗೆ ಶಾಸನಬದ್ಧ ಲೆಕ್ಕಪರಿಶೋಧಕರು ಮಾಡಿರುವ ಪ್ರಮುಖ ಟೀಕೆಗಳ ಉದಾಹರಣಾತ್ಮಕ ಪಟ್ಟಿಯನ್ನು **ಅನುಬಂಧ 7ರಲ್ಲಿ** ನೀಡಲಾಗಿದೆ.

## ಶಾಸನಬದ್ಧ ನಿಗಮಗಳಿಂದ ಲೆಕ್ಕಪತ್ರಗಳ ಅಂತಿಮಗೊಳಿಸುವಿಕೆ

**1.43** ಶಾಸನಬದ್ಧ ನಿಗಮಗಳ ಲೆಕ್ಕಪತ್ರಗಳ ಮೇಲಿನ ಸಿ.ಎ.ಜಿ.ರವರ ಲೆಕ್ಕಪರಿಶೋಧನಾ ವರದಿಗಳೇ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳು (ಪ್ರ.ಲೆ.ವ). ಈ ವರದಿಗಳನ್ನು ಆಯಾ ಕಾಯ್ದೆಗಳ ಅನುವುಗಳ ಅನುಸಾರ ಶಾಸನಸಭೆಯ ಮುಂದೆ ಮಂಡಿಸತಕ್ಕದ್ದು.

ಆರು ಶಾಸನಬದ್ಧ ನಿಗಮಗಳ 2012–13ರ ಸಾಲಿನ ಲೆಕ್ಕಪತ್ರಗಳ ಪರಿಶೋಧನೆ 2013–14 ರಲ್ಲಿ ಪೂರ್ಣಗೊಂಡಿತ್ತು. ಎಲ್ಲಾ ಶಾಸನಬದ್ಧ ನಿಗಮಗಳ 2012–13ನೇ ಸಾಲಿನ ಪ್ರ.ಲೆ.ವ.ಗಳನ್ನು ರಾಜ್ಯ ಶಾಸನ ಸಭೆಯಲ್ಲಿ ಮಂಡಿಸುವುದಕ್ಕಾಗಿ ಕಳುಹಿಸಲಾಗಿದೆ.

ಆರರಲ್ಲಿ ನಾಲ್ಕು ಶಾಸನಬದ್ಧ ನಿಗಮಗಳು 2013–14ನೇ ಸಾಲಿನ ತಮ್ಮ ಲೆಕ್ಕಪತ್ರಗಳನ್ನು ಪ್ರಧಾನ ಮಹಾಲೇಖಪಾಲರಿಗೆ ಸಲ್ಲಿಸಿದ್ದವು (ಸೆಪ್ಟೆಂಬರ್ 2014ರ ಅಂತ್ಯಕ್ಕೆ). ಈ ಎಲ್ಲಾ ಶಾಸನಬದ್ಧ ನಿಗಮಗಳ ಲೆಕ್ಕಪರಿಶೋಧನೆಯು ಪ್ರಗತಿಯಲ್ಲಿತ್ತು (ಸೆಪ್ಟೆಂಬರ್ 2014). ಎರಡು ಶಾಸನಬದ್ಧ ನಿಗಮಗಳು (ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಮತ್ತು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ) 2013–14ನೇ ಸಾಲಿನ ತಮ್ಮ ಲೆಕ್ಕಪತ್ರಗಳನ್ನು ಸೆಪ್ಟೆಂಬರ್ 2014ರವರೆಗೆ ಸಲ್ಲಿಸಿರಲಿಲ್ಲ.

**1.44** ಅಂತಿಮಗೊಳಿಸಿದ ಲೆಕ್ಕಪತ್ರಗಳ ಪ್ರ.ಲೆ.ವ. ಲೆಕ್ಕಪತ್ರಗಳ ನಿರ್ವಹಣೆಯ ಗುಣಮಟ್ಟದಲ್ಲಿ ಸುಧಾರಣೆಯಾಗಬೇಕೆಂದು ಸೂಚಿಸಿತು. ಸಿ.ಎ.ಜಿ.ಯವರ ಟೀಕೆಗಳ ಒಟ್ಟಾರೆ ಹಣದ ಮೌಲ್ಯವನ್ನು ಈ ಕೆಳಗೆ ನೀಡಲಾಗಿದೆ:

**ಕೋಷ್ಟಕ 1.12: ಶಾಸನಬದ್ಧ ನಿಗಮಗಳ ಲೆಕ್ಕಪತ್ರಗಳ ಮೇಲಿನ ಟೀಕೆಗಳ ಒಟ್ಟಾರೆ ಹಣದ ಮೌಲ್ಯದ ವಿವರಗಳು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಟೀಕೆಗಳ ಪರಿಣಾಮ | 2011–12 | | 2012–13 | | 21013–14 | |
|---|---|---|---|---|---|---|---|
| | | ಲೆಕ್ಕಪತ್ರಗಳ ಸಂಖ್ಯೆ | ಮೊತ್ತ | ಲೆಕ್ಕಪತ್ರಗಳ ಸಂಖ್ಯೆ | ಮೊತ್ತ | ಲೆಕ್ಕಪತ್ರಗಳ ಸಂಖ್ಯೆ | ಮೊತ್ತ |
| 1 | ಲಾಭದಲ್ಲಿ ಇಳಿಕೆ | – | – | 4 | 35.39 | 2 | 12.03 |
| 2 | ಲಾಭದಲ್ಲಿ ಏರಿಕೆ | – | – | – | – | 1 | 2.47 |
| 3 | ನಷ್ಟದಲ್ಲಿ ಇಳಿಕೆ | – | – | – | – | – | – |
| 4 | ನಷ್ಟದಲ್ಲಿ ಏರಿಕೆ | 1 | 10.90 | 2 | 21.37 | 3 | 27.15 |

**1.45** ಶಾಸನಬದ್ಧ ನಿಗಮಗಳಿಗೆ ಸಂಬಂಧಿಸಿದ ಕೆಲವೊಂದು ಮುಖ್ಯವಾದ ಟೀಕೆಗಳನ್ನು ಕೆಳಗೆ ನೀಡಲಾಗಿದೆ:

**ಬೆಂಗಳೂರು ಮಹಾನಗರ ಸಾರಿಗೆ ನಿಗಮ (2012–13)**

- ಮಾರ್ಚ್ 1997ರಿಂದ ಆರಂಭವಾಗುವಂತೆ ಐದು ಸಮಾನ ಕಂತುಗಳಲ್ಲಿ ಮರುಪಾವತಿಯಾಗಬೇಕಿದ್ದ ₹ 0.72 ಕೋಟಿ ಅರ್ಥೋಪಾಯ ಸಾಲಗಳಿಗೆ (1997ರಲ್ಲಿ ಕ.ರಾ.ರ.ಸಾ.ನಿ.ದ ಪುನರ್ ರಚನೆ ಮತ್ತು ವಿಭಜನೆಯ ತರುವಾಯ ಬೆಂ.ಮ.ಸಾ.ನಿ.ಗೆ ವರ್ಗಾಯಿಸಲ್ಪಟ್ಟಿತು) ಸಂಬಂಧಿಸಿದಂತೆ ಕರ್ನಾಟಕ ಸರ್ಕಾರಕ್ಕೆ ಪಾವತಿಸಬೇಕಿದ್ದ ₹ 0.52 ಕೋಟಿ ದಂಡ ರೂಪದ ಬಡ್ಡಿಗೆ ಅನುವು ಮಾಡಿರಲಿಲ್ಲ. ಕರ್ನಾಟಕ ಸರ್ಕಾರವು ಕ.ರಾ.ರ.ಸಾ.ನಿ. ಮತ್ತು ಬೆಂ.ಮ.ಸಾ.ನಿ ಗಳಿಗೆ ಸಂಬಂಧಿಸಿದಂತೆ ಬಡ್ಡಿಯನ್ನು ಮನ್ನಾ ಮಾಡುವ ಕ.ರಾ.ರ.ಸಾ.ನಿ. ಕೋರಿಕೆಯನ್ನು ನಿರಾಕರಿಸಿತ್ತು (ಮಾರ್ಚ್ 2011). ಅನುವು ಮಾಡದಿರುವಿಕೆಯು ಚಾಲ್ತಿ ಬಾಧ್ಯತೆ ಮತ್ತು ಅನುವುಗಳನ್ನು ಕಡಿಮೆ ತೋರಿಸುವಲ್ಲಿ ಹಾಗೂ ವರ್ಷದ ನಷ್ಟವನ್ನು ₹ 0.52 ಕೋಟಿಯಷ್ಟು ಕಡಿಮೆ ತೋರಿಸುವಲ್ಲಿ ಪರಿಣಮಿಸಿತು.

- ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಯು 2012–13ರಲ್ಲಿ ಮುಕ್ತಾಯಗೊಂಡ ₹ 4.10 ಕೋಟಿ ಮೊತ್ತದ ಸಿವಿಲ್ ಕಾಮಗಾರಿಗಳನ್ನು ಒಳಗೊಂಡಿತ್ತು. ಇದು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಯು ₹ 4.10 ಕೋಟಿಯಷ್ಟು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ – ಸಿವಿಲ್ ಕಾಮಗಾರಿಯನ್ನು ಹೆಚ್ಚಿಗೆ ತೋರಿಸುವಲ್ಲಿ ಮತ್ತು ಸ್ಥಿರಾಸ್ತಿ ಕಡಿಮೆ ತೋರಿಸುವಲ್ಲಿ, ಸವಕಳಿಯನ್ನು ₹ 0.07 ಕೋಟಿಯಷ್ಟು ಕಡಿಮೆ ತೋರಿಸುವಲ್ಲಿ, ಹಿಂದಿನ ಸಾಲಿನ ವೆಚ್ಚಗಳನ್ನು ₹ 0.02 ಕೋಟಿಯಷ್ಟು ಕಡಿಮೆ ತೋರಿಸುವಲ್ಲಿ ಮತ್ತು ವರ್ಷದ ನಷ್ಟವನ್ನು ₹ 0.09 ಕೋಟಿಯಷ್ಟು ಕಡಿಮೆ ತೋರಿಸುವಲ್ಲಿ ಪರಿಣಮಿಸಿತು.

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (2012–13)**

- 31 ಮಾರ್ಚ್ 2013ರ ಮೊದಲೇ ತೀರ್ಪು ಬಂದಿರುವ ಮತ್ತು ಕಂಪನಿಯಿಂದ ಅಂಗೀಕೃತವಾಗಿರುವ ಎಂ.ವಿ.ಸಿ. ಪ್ರಕರಣಗಳಲ್ಲಿ ಕೇಂದ್ರ ಕಛೇರಿಯ ಒಂದು ಕೋಟಿ (ಬಡ್ಡಿ ಹೊರತು ಪಡಿಸಿ) ಹಾಗೂ ಮೈಸೂರು ಗ್ರಾಮೀಣ ವಿಭಾಗದ ₹ 0.14 ಕೋಟಿ (ಬಡ್ಡಿ ಸೇರಿಸಿ) ಬಾಧ್ಯತೆಗಳಿಗೆ ಅನುವು ಮಾಡದಿರುವುದು ಬಾಧ್ಯತೆ ಮತ್ತು ವೆಚ್ಚವನ್ನು ಕಡಿಮೆ ತೋರಿಸುವಲ್ಲಿ ಹಾಗೂ ತತ್ಪರಿಣಾಮವಾಗಿ ಲಾಭವನ್ನು ₹ 1.14 ಕೋಟಿಯಷ್ಟು ಹೆಚ್ಚಿಗೆ ತೋರಿಸುವಲ್ಲಿ ಪರಿಣಮಿಸಿತು.

- ಮಾರ್ಚ್ 2013ರಲ್ಲಿ ಟಾಟಾ ಮೋಟಾರ್ಸ್‌ರವರಿಂದ ಸ್ವೀಕೃತಗೊಂಡ ಮತ್ತು ಬಸ್ ಕವಚ ನಿರ್ಮಾಣದಾರರಿಗೆ (ವೀರ ವಾಹನ ಉದ್ಯೋಗ್ ಲಿಮಿಟೆಡ್) ಬಸ್ ಕವಚ ನಿರ್ಮಿಸಲು ಬಟವಾಡೆ ಮಾಡಿದ ಏಳು ಛಾಸಿಗಳಿಗೆ ಸಂಬಂಧಿಸಿದ ಬಾಧ್ಯತೆ ₹ 1.15 ಕೋಟಿಗೆ ಅನುವು ಮಾಡದಿರುವುದು ಬಾಧ್ಯತೆ ಮತ್ತು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಯನ್ನು ₹ 1.15 ಕೋಟಿಯಷ್ಟು ಕಡಿಮೆ ತೋರಿಸುವಲ್ಲಿ ಪರಿಣಮಿಸಿತು.

**ಲೆಕ್ಕಪರಿಶೋಧನೆಯ ಸೂಚನೆಯಿಂದಾದ ವಸೂಲಿಗಳು**

**1.46** 2013–14ರಲ್ಲಿ ಸಾ.ವ.ಉ.ಗಳ ವಹಿವಾಟು ಲೆಕ್ಕಪರಿಶೋಧನೆ ನಡೆಸುವಾಗ, ಆಡಳಿತ ವರ್ಗಕ್ಕೆ ₹ 5.15 ಕೋಟಿ ವಸೂಲಾತಿಗಾಗಿ ಸೂಚಿಸಲಾಗಿದ್ದು, ಅವುಗಳಲ್ಲಿ ಪ್ರಸಕ್ತ ವರ್ಷದಲ್ಲಿ ಯಾವುದೇ ವಸೂಲಾತಿಯಾಗಿಲ್ಲ. ಆದಾಗ್ಯೂ, ಹಿಂದಿನ ವರ್ಷಗಳಲ್ಲಿ ಸೂಚಿಸಲಾಗಿದ್ದ ₹ 6.89 ಕೋಟಿ ವಸೂಲಾತಿಯನ್ನು 2013–14ರಲ್ಲಿ ಮಾಡಲಾಯಿತು.

**ಸಾ.ವ.ಉ.ಗಳ ಬಂಡವಾಳ ಹಿಂತೆಗೆತ, ಖಾಸಗೀಕರಣ ಮತ್ತು ಪುನರ್‌ರಚನೆ**

**1.47** ರಾಜ್ಯ ಸರ್ಕಾರವು ರಾಜ್ಯದಲ್ಲಿರುವ ಸಾ.ವ.ಉ.ಗಳ ಸುಧಾರಣೆ ಮತ್ತು ಖಾಸಗೀಕರಣಗೊಳಿಸುವ ಬಗ್ಗೆ ವ್ಯಾಪಕ ಕಾರ್ಯನೀತಿಯೊಂದಕ್ಕೆ ಒಪ್ಪಿಗೆ ನೀಡಿದೆ ಹಾಗೂ ಅಂಗೀಕರಿಸಿದೆ (ಫೆಬ್ರವರಿ 2001). ಅದರಂತೆ ಸರ್ಕಾರವು 31 ಸಾ.ವ.ಉ.ಗಳನ್ನು ಮುಚ್ಚುವಿಕೆಗೆ, ಖಾಸಗೀಕರಣಕ್ಕೆ ಮತ್ತು ಪುನರ್‌ರಚನೆಗಾಗಿ ಗುರುತಿಸಿತು. ಸೆಪ್ಟಂಬರ್ 2014ರ ಅಂತ್ಯಕ್ಕೆ ಐದು[16] ಕಂಪನಿಗಳನ್ನು ಸಮಾಪನಗೊಳಿಸಲಾಯಿತು/ವಿಲೀನಗೊಳಿಸಲಾಯಿತು. ಮುಚ್ಚುವಿಕೆ/ಖಾಸಗೀಕರಣ/ ಪುನರ್‌ರಚನೆಗೆ ಗುರುತಿಸಲಾದ ಉಳಿದ 26 ಕಂಪನಿಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳ ಸ್ಥಿತಿಯು ಕೆಳಕಂಡಂತಿದೆ:

**ಕೋಷ್ಟಕ 1.13: ಸಾ.ವ.ಉ.ಗಳ ಬಂಡವಾಳ ಹಿಂತೆಗೆತ/ಪುನರ್‌ರಚನೆಯ ಸ್ಥಿತಿ**

| ವಿವರಗಳು | ಕಂಪನಿಗಳ ಸಂಖ್ಯೆ | ಜಾರಿ ಮಾಡಿದ ಸರ್ಕಾರಿ ಆದೇಶಗಳು | ಜಾರಿ ಮಾಡದಿರುವ ಸರ್ಕಾರಿ ಆದೇಶಗಳು |
|---|---|---|---|
| ಮುಚ್ಚುವಿಕೆಗೆ ನಿರ್ಧರಿಸಿರುವ ಕಾರ್ಯಸ್ಥಗಿತ ಸರ್ಕಾರಿ ಕಂಪನಿಗಳು | 14 | 14[∋] | - |
| ಮುಚ್ಚುವಿಕೆಗೆ ನಿರ್ಧರಿಸಿರುವ ಕಾರ್ಯನಿರತ ಸರ್ಕಾರಿ ಕಂಪನಿಗಳು | 3 | 1[∞] | 2[@] |
| ಖಾಸಗೀಕರಣಕ್ಕೆ ನಿರ್ಧರಿಸಿರುವ ಕಾರ್ಯನಿರತ ಸರ್ಕಾರಿ ಕಂಪನಿಗಳು | 8 | 6[♥] | 2[♣] |
| ಪುನರ್‌ರಚನೆಗೆ ನಿರ್ಧರಿಸಿರುವ ಕಾರ್ಯನಿರತ ಸರ್ಕಾರಿ ಕಂಪನಿಗಳು | 1 | 1[Ω] | - |

ಅಕ್ಟೋಬರ್ 2005ರಲ್ಲಿ ಸರ್ಕಾರವು ಸಾರ್ವಜನಿಕ ವಲಯ ಉದ್ದಿಮೆಗಳ ಸುಧಾರಣೆಗೆ ಅಂಗೀಕರಿಸಿದ ಸಮಗ್ರ ನೀತಿಯು ಒಂದೊಂದೇ ಪ್ರಕರಣವನ್ನು ಅಂದಾಜು ಮಾಡುವುದರ ಜೊತೆಗೆ ಹಿಂದಿನ ಸುಧಾರಣಾ ಪ್ರಕ್ರಿಯೆ ಸೇರಿಸಿ ಅದನ್ನು ಜಾರಿಗೊಳಿಸುವ ವಿಧಾನವನ್ನು ನಿರೂಪಿಸಿತು. ಅಧ್ಯಯನದ ನಂತರ, ಸೂಕ್ತ ನಿರ್ದಿಷ್ಟ ಪರಿಹಾರವನ್ನು ಪರಿಗಣಿಸಬೇಕಿತ್ತು. ಸಾ.ವ.ಉ.ಗಳ ಪ್ರಕರಣವಾರು ಅಧ್ಯಯನದ ವರದಿಯ ಶಿಫಾರಸುಗಳ ಪ್ರಸ್ತುತ ಸ್ಥಿತಿಯನ್ನು ನಿರೀಕ್ಷಿಸಲಾಗಿದೆ (ಸೆಪ್ಟಂಬರ್ 2014).

**ವಿದ್ಯುತ್ ವಲಯದಲ್ಲಿ ಸುಧಾರಣೆಗಳು**

**1.48** ರಾಜ್ಯದಲ್ಲಿ ವಿದ್ಯುತ್ ದರಗಳನ್ನು ಸಮನ್ವಯಗೊಳಿಸುವ, ವಿದ್ಯುತ್ ಉತ್ಪಾದನೆಯ, ಪ್ರಸರಣದ ಮತ್ತು ವಿತರಣೆಯ ವಿಷಯಗಳಲ್ಲಿ ಸಲಹೆ ನೀಡುವ ಮತ್ತು ಪರವಾನಗಿ ನೀಡುವ ಉದ್ದೇಶಗಳೊಂದಿಗೆ ಕರ್ನಾಟಕ ವಿದ್ಯುತ್ ಸುಧಾರಣಾ ಕಾಯ್ದೆ, 1999 ಅಡಿಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗವನ್ನು (ಕೆಇಆರ್‌ಸಿ) ರಚಿಸಲಾಗಿದೆ (ಆಗಸ್ಟ್ 1999).

[16] ಕರ್ನಾಟಕ ಟಂಗಸ್ಟನ್ ಮೋಲಿ ನಿಯಮಿತ, ಕರ್ನಾಟಕ ಅಗ್ರೋ ಪ್ರೊಟೀನ್ಸ್ ನಿಯಮಿತ, ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಚಲನಚಿತ್ರ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ ಮತ್ತು ಕರ್ನಾಟಕ ಸಣ್ಣ ಕೈಗಾರಿಕಾ ಮಾರಾಟ ನಿಗಮ ನಿಯಮಿತ.

[∋] ಅನುಬಂಧ–1ರಲ್ಲಿರುವ ಎಲ್ಲ ಕಾರ್ಯಸ್ಥಗಿತ ಸರ್ಕಾರಿ ಕಂಪನಿಗಳು.

[∞] ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ.

[@] ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ರಾಜ್ಯ ಎಲೆಕ್ಟ್ರಾನಿಕ್ಸ್ ಅಭಿವೃದ್ಧಿ ನಿಗಮ ನಿಯಮಿತ.

[♥] ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮ ನಿಯಮಿತ, ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ, ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ನಿಯಮಿತ, ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ, ಮೈಸೂರು ಮಿನರಲ್ಸ್ ನಿಯಮಿತ, ಶ್ರೀ ಕಂಠೀರವ ಸ್ಟುಡಿಯೋಸ್ ನಿಯಮಿತ.

[♣] ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮೈಸೂರು ಕಾಗದ ಕಾರ್ಖಾನೆ ನಿಯಮಿತ.

Ω ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದೊಂದಿಗೆ ವಿಲೀನವಾಗಲಿರುವ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತ.

**1.49** ಫೆಬ್ರವರಿ 2000ರಲ್ಲಿ ಕೇಂದ್ರ ವಿದ್ಯುತ್ ಮಂತ್ರಾಲಯ ಮತ್ತು ರಾಜ್ಯ ಸರ್ಕಾರಗಳ ನಡುವೆ ಗುರುತಿಸಲ್ಪಟ್ಟ ಮೈಲಿಗಲ್ಲುಗಳೊಂದಿಗೆ ವಿದ್ಯುತ್ ವಲಯದ ಸುಧಾರಣೆಗಳನ್ನು ಅನುಷ್ಠಾನಗೊಳಿಸಲು ಒಂದು ಸಹಬದ್ಧತೆಯ ತಿಳುವಳಿಕೆ ಪತ್ರವೊಂದಕ್ಕೆ (ಎಂಒಯು) ಸಹಿ ಹಾಕಲಾಯಿತು. ಐದು[17] ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಂಬಂಧಿಸಿದಂತೆ ಪ್ರಮುಖ ಮೈಲಿಗಲ್ಲುಗಳನ್ನು ಕುರಿತ ಈವರೆಗಿನ ಸಾಧನೆಯ ಪ್ರಗತಿಯನ್ನು ಕೆಳಗೆ ಕೊಡಲಾಗಿದೆ:

**ಕೋಷ್ಟಕ 1.14: ವಿದ್ಯುತ್ ವಲಯದ ಸುಧಾರಣೆಗಳ ಸ್ಥಿತಿ**

| ಮೈಲಿಗಲ್ಲು | ಮಾರ್ಚ್ 2014ರಲ್ಲಿದ್ದಂತೆ ಸಾಧನೆ | | | | |
|---|---|---|---|---|---|
| | ಬೆಸ್ಕಾಂ | ಸೆಸ್ಕೊ | ಹೆಸ್ಕಾಂ | ಜೆಸ್ಕಾಂ | ಮೆಸ್ಕಾಂ |
| 2012ಕ್ಕೆ ಎಲ್ಲಾ ಗ್ರಾಮಗಳ ಶೇಕಡ 100ರಷ್ಟು ವಿದ್ಯುದೀಕರಣ | ಶೇಕಡ 100 | ಶೇಕಡ 100 | ಶೇಕಡ 99 (26 ಹಳ್ಳಿಗಳನ್ನು ವಿದ್ಯುದೀಕರಣ ಗೊಳಿಸಬೇಕಾಗಿದೆ) | ಶೇಕಡ 100 | ಶೇಕಡ 99.90 (3 ಹಳ್ಳಿಗಳನ್ನು ವಿದ್ಯುದೀಕರಣ ಗೊಳಿಸಬೇಕಾಗಿದೆ) |
| ಎಂಒಯುನಲ್ಲಿ ಇದ್ದ ಬದ್ದತೆಯಂತೆ ಒಟ್ಟಾರೆ ಪ್ರಸರಣ ಮತ್ತು ವಿತರಣಾ ನಷ್ಟವನ್ನು 2000–01ರಿಂದ ವರ್ಷಕ್ಕೆ ಶೇ.5ರಷ್ಟು ಇಳಿತದ ಗುರಿಯೊಂದಿಗೆ ಶೇ.10 ರಿಂದ ಶೇ.15ರಷ್ಟು ಇಳಿಸುವಿಕೆ | ಶೇಕಡ 13.96 | ಶೇಕಡ 14.73 | ಶೇಕಡ 18.05 | ಲಭ್ಯವಿಲ್ಲ | ಶೇಕಡ 11.93 |
| 2004–05ರಷ್ಟರಲ್ಲಿ ಎಲ್ಲಾ ಗ್ರಾಹಕರಿಗೆ ಶೇ.100ರಷ್ಟು ಮಾಪಕಗಳ ಅಳವಡಿಕೆ | ನೀರಾವರಿ ಪಂಪ್‌ಸೆಟ್ (ಐಪಿ ಸೆಟ್) ಹೊರತು ಪಡಿಸಿ ಇತರೆ ಎಲ್ಲಾ ಪ್ರವರ್ಗದ ಬಳಕೆದಾರರಿಗೆ ಸಂಬಂಧಿಸಿದಂತೆ ಮಾಪಕಗಳ ಅಳವಡಿಕೆ ಪೂರ್ಣಗೊಂಡಿದೆ. | ಎಲ್ಲ ಪ್ರವರ್ಗದ ಬಳಕೆದಾರರಿಗೆ ಸಂಬಂಧಿಸಿದಂತೆ ಮಾಪಕಗಳ ಅಳವಡಿಕೆಯ ಒಟ್ಟಾರೆ ಪ್ರಗತಿಯು ಶೇಕಡ 93.50 ರಷ್ಟಿತ್ತು. | ಎಲ್ಲಾ ಪ್ರವರ್ಗದ ಬಳಕೆದಾರರ ಪೈಕಿ 5,05,407 ಬಳಕೆದಾರರಿಗೆ ಮೀಟರುಗಳನ್ನು ಅಳವಡಿಸಬೇಕಾಗಿತ್ತು. | ಐ.ಪಿ. ಬಳಕೆದಾರರನ್ನು ಹೊರತುಪಡಿಸಿ ಎಲ್ಲಾ ಪ್ರವರ್ಗದ ಬಳಕೆದಾರರಿಗೆ ಮಾಪಕಗಳ ಅಳವಡಿಕೆಯು ಪೂರ್ಣಗೊಂಡಿತ್ತು. | ಎಲ್ಲಾ ಪ್ರವರ್ಗದ ಬಳಕೆದಾರರಿಗೆ ಸಂಬಂಧಿಸಿದಂತೆ ಮಾಪಕಗಳ ಅಳವಡಿಕೆಯ ಒಟ್ಟಾರೆ ಪ್ರಗತಿಯು ಶೇಕಡ 98.08 ರಷ್ಟಿತ್ತು. |
| ಸೆಪ್ಟೆಂಬರ್ 2001ರಷ್ಟರಲ್ಲಿ 11 ಕೆ.ವಿ. ಉಪಕೇಂದ್ರಗಳ ಮಟ್ಟದಲ್ಲಿ ವಿದ್ಯುತ್ ಲೆಕ್ಕಪರಿಶೋಧನೆ | ಮಾಹಿತಿ ಒದಗಿಸಲಾಗಿಲ್ಲ | ಮಾಡಲಾಗಿದೆ | ಮಾಡಲಾಗಿದೆ | ಮಾಡಲಾಗಿದೆ | ಮಾಡಲಾಗಿದೆ |

**(ಮೂಲ: ಎಸ್ಕಾಂಗಳಿಂದ ಒದಗಿಸಲ್ಪಟ್ಟ ಮಾಹಿತಿ; ಎಸ್ಕಾಂಗಳ ವಾರ್ಷಿಕ ವರದಿಗಳು)**

[17] ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ), ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕೊ), ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಜೆಸ್ಕಾಂ), ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಹೆಸ್ಕಾಂ) ಮತ್ತು ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಮೆಸ್ಕಾಂ).